# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity
BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options



CALL US : 9448633038
Email us Your Advertisement Content to : hampitimes@gmail.com




ಸಂಪುಟ:01 • ಸಂಚಿಕೆ:189 • ನೋಂದಣಿ ನಂ.:KARKAN27911 • ವಿಜಯನಗರ • 21.12.2023 • ಗುರುವಾರ • ಪುಟ:04 • ಬೆಲೆ:2
Volume:01 • Issue:189 • Reg.No:KARKAN27911 • VIJAYANAGARA • 21.12.2023 • Thursday • Page:04 • Rs:2









# ಪತ್ನಿ ಕ್ಲಿನಿಕ್‌ನಲ್ಲಿ ಆಯುಷ್ ಔಷಧಿ ಮಾರಾಟ

## ಹಂಪಸಾಗರ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುವ ವೈದ್ಯ ಡಾ.ಗುರುಬಸವರಾಜ ಅವರ ಪತ್ನಿಯ ಗುರುಕೃಪ ಕ್ಲಿನಿಕ್ ಮೇಲೆ ವೈದ್ಯರ ತಂಡ ದಾಳಿ

## ಹೊಸಪೇಟೆಯಲ್ಲಿ ಬಯಲಾದ ಎರಡು ನಕಲಿ ಕ್ಲಿನಿಕ್, ಒಂದು ಲ್ಯಾಬ್ ಸೀಜ್ । ಆಯುಷ್ ಇಲಾಖೆ ಮೇಲಾಧಿಕಾರಿಗಳ ಶ್ಯಾಮೀಲು ಶಂಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳ ಚಿಕಿತ್ಸೆ, ಔಷಧಿಗಾಗಿ ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದ್ದರು. ರೋಗಿಗಳಿಗೆ ಔಷಧಿಗಳು ದೊರೆಯುತ್ತಿಲ್ಲವೆಂಬ ಕೂಗು ಇತ್ತೀಚೆಗೆ ದಟ್ಟವಾಗಿ ಕೇಳಿಬರುತ್ತಲಿದೆ. ಅದಕ್ಕೆ ಪುಷ್ಠಿ ಎಂಬಂತೆ ಬುಧವಾರ ವಿಜಯನಗರ ಜಿಲ್ಲಾ ವೈದ್ಯಾಧಿಕಾರಿಗಳ ತಂಡದಿಂದ ಹೊಸಪೇಟೆ ನಗರದ ವಿವಿಧ ನಕಲಿ ಕ್ಲಿನಿಕ್ ಮೇಲೆ ನಡೆದ ದಾಳಿಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಸರ್ಕಾರಿ ಔಷಧಿಗಳು ಖಾಸಗಿ ಕ್ಲೀನಿಕ್‌ನಲ್ಲಿ ಸಿಕ್ಕಿರುವುದು ಸಾಕ್ಷಿಕರಿಸುತ್ತವೆ.

ನಗರದ ಬಳ್ಳಾರಿ ರಸ್ತೆ ಶ್ರೀನಿವಾಸ ಕ್ಲಿನಿಕ್ ಡಾ.ಮಲ್ಲಪ್ಪ ಆಚಾರ್, ನಗರದ ಪ್ರೇಮನಗರದಲ್ಲಿ ಸರ್ಕಾರಿ ವೈದ್ಯನ ಪತ್ನಿ ಡಾ.ರಾಧಗುರುಬಸವರಾಜ ಪರವಾನಗಿ ಪಡೆಯದೇ ನಡೆಸುತ್ತಿರುವ ಗುರುಕೃಪ ನಕಲಿ ಕ್ಲೀನಿಕ್ ಮತ್ತು ಡ್ಯಾಂ ರಸ್ತೆಯ ಲೈಫ್‌ಕೇರ್ ಲ್ಯಾಬ್ ಮೇಲೆ ವೈದ್ಯರ ತಂಡ ದಿಢೀರ್ ದಾಳಿ ನಡೆಸಿ ನಕಲಿ ವೈದರು ತಮ್ಮ ಕ್ಲಿನಿಕ್ ಮತ್ತು ಲ್ಯಾಬ್‌ನಲ್ಲಿ ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಔಷಧಿಗಳು ಸಹಿತ ಕ್ಲಿನಿಕ್‌ಗಳನ್ನು ಸೀಜ್ ಮಾಡಿ ಸೀಲ್ ಜಡಿದಿದ್ದಾರೆ.

ನಗರದ ವಿಜಯ ಟಾಕೀಸ್ ಹಿಂಭಾಗದ ಪ್ರೇಮನಗರದಲ್ಲಿ ವೈದ್ಯೆ ಡಾ.ರಾಧಗುರುಬಸವರಾಜ ಅವರು ವೈದ್ಯಕೀಯ ಪದವಿ ಹೊಂದಿದ್ದರೂ ಕೆಪಿಎಂ ಕಾಯ್ದೆಯಡಿ ನೋಂದಾಯಿಸಿಕೊಳ್ಳದೆ ಸೇವೆಯಲ್ಲಿ ತೊಡಗಿರುವುದು ಪರಿಶೀಲನೆ ವೇಳೆ ಕಂಡುಬಂದಿದೆ. ಇವರ ಕ್ಲಿನಿಕ್‌ನಲ್ಲಿ ಆಯುಷ್ ಇಲಾಖೆಯ ಅಪಾರ ಪ್ರಮಾಣದ ಸರ್ಕಾರಿ ಔಷಧಿಗಳು ಸಂಗ್ರಹ ಕಂಡುಬಂದಿದ್ದು, ಆಯುರ್ವೇದಿಕ್ ಚಿಕಿತ್ಸೆ ಬದಲಿಗೆ ಹಲೋಪೆಥಿಕ್ ಇಂಜೆಕ್ಷನ್, ಮೆಡಿಸಿನ್ ನೀಡುತ್ತಿರುವುದು ಸೇರಿದಂತೆ ಅಕ್ರಮವಾಗಿ ಆಯುಷ್ ಇಲಾಖೆಯ ಸರ್ಕಾರಿ ಔಷಧಿಗಳ ದಾಸ್ತಾನು ಸಿಕ್ಕಿರುವುದು ಅಧಿಕಾರಗಳನ್ನು ಬೆಚ್ಚಿಬೀಳಿಸಿದೆ. ಡಾ.ರಾಧಗುರುಬಸವರಾಜ ಅವರ ಪತಿ ಡಾ.ಗುರುಬಸವರಾಜ ಹಂಪಸಾಗರದ ಸರ್ಕಾರಿ ಆಯುಷ್ ಆಸ್ಪತ್ರೆಯ ವೈದ್ಯರಾಗಿ ಸೇವೆಸಲ್ಲಿಸುತ್ತಿದ್ದಾರೆ. ಪತ್ನಿಯ ಕ್ಲಿನಿಕ್‌ನಲ್ಲೆ ಪತಿ ಸೇವೆ ಸಲ್ಲಿಸುವ ಇಲಾಖೆಯ ಸರ್ಕಾರಿ ಔಷಧಿಗಳು ಸಿಕ್ಕಿರುವುದು ಇಲಾಖೆಯ ಮೇಲಾಧಿಕಾರಿಗಳ ಶ್ಯಾಮೀಲು ಇದೆ ಎಂಬ ಶಂಕೆಯೂ ವ್ಯಕ್ತವಾಗಿದೆ. ನಗರದಲ್ಲಿ ಪರವಾನಗಿ ಪಡೆಯದೆ ನಡೆಸುತ್ತಿರುವ ಕ್ಲಿನಿಕ್ ಗಳ ಮೇಲೂ ದಾಳಿ ನಡೆದಿದ್ದು, ನೋಟೀಸ್ ಜಾರಿ ಮಾಡಿದ್ದಾರೆ.


ಡಿಎಚ್‌ಒ ಶಂಕರ್ ನಾಯ್ಕ ನಿರ್ದೇಶನದ ಮೇರೆಗೆ ನಕಲಿ ಕ್ಲೀನಿಕ್ ಮೇಲೆ ನಡೆದ ದಾಳಿಯಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಂ.ವಿನಯ್, ತಾಲೂಕು ಆರೋಗ್ಯಾಧಿಕಾರಿ ಡಾ.ಭಾಸ್ಕರ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊಡ್ಡಮನಿ, ಡಾ.ಧರ್ಮನಗೌಡ, ಫಾರ್ಮಸಿ ಅಧಿಕಾರಿ ಚನ್ನಬಸವರಾಜ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.



> **ಡಾ.ರಾಧಗುರುಬಸವರಾಜ ಅವರಿಗೆ ಈ ಹಿಂದೆಯೇ ಪರವಾನಗಿ ಪಡೆಯುವಂತೆ ನೋಟೀಸ್ ನೀಡಲಾಗಿದ್ದರೂ ನಿರ್ಲಕ್ಷ್ಯವಹಿಸಿದ್ದಾರೆ. ದಾಳಿ ವೇಳೆ ಅವರ ಕ್ಲಿನಿಕ್‌ನಲ್ಲಿ ಅಪಾರ ಪ್ರಮಾಣದ ಸರ್ಕಾರಿ ಔಷಧಿಗಳು ಕಂಡುಬಂದಿದ್ದು ಕ್ಲಿನಕ್ ಸೀಜ್ ಮಾಡಲಾಗಿದೆ. ಶ್ರೀನಿವಾಸ ಕ್ಲಿನಿಕ್ ನಡೆಸುವ ವೈದ್ಯನ ಬಳಿಯೂ ವೈದ್ಯಕೀಯ ಸರ್ಟಿಫಿಕೇಟ್‌ಗಳಿಲ್ಲದ್ದರಿಂದ ಅದನ್ನು ಸೀಜ್ ಮಾಡಲಾಗಿದೆ. ಲೈಫ್ ಕೇರ್ ಲ್ಯಾಬ್ ಸೀಜ್ ಮಾಡಲಾಗಿದ್ದು, ಕರ್ನಾಟಕ ವೈದ್ಯಕೀಯ ಸೇವೆಗಳ ಕಾನೂನು ಉಲ್ಲಂಘನೆ ಮಾಡಿದವರಿಗೆ ನೋಟೀಸ್ ಜಾರಿ ಮಾಡಲಾಗಿದೆ.**
>
> **– ಶಂಕರ ನಾಯ್ಕ ಡಿಎಚ್‌ಒ, ವಿಜಯನಗರ.**

**ಮೈಕ್ರೋ ನ್ಯೂಸ್**

## ಗೊಗ್ಗ ವಿಶ್ವನಾಥ, ಕಾಕುಬಾಳ್ ರಾಜೇಂದ್ರ ಅವಿರೋಧ ಆಯ್ಕೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಹೊಸಪೇಟೆ ಗೃಹ ನಿರ್ಮಾಣ ಸಹಕಾರ ಸಂಘ ನಿ. ಇದರ ನೂತನ ಅಧ್ಯಕ್ಷರಾಗಿ ಗೊಗ್ಗ ವಿಶ್ವನಾಥ, ಉಪಾಧ್ಯಕ್ಷರಾಗಿ ಕಾಕುಬಾಳ್ ರಾಜೇಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಿ.20 ರಂದು ನಗರದ ಸಂಘದ ಕಚೇರಿಯಲ್ಲಿ ಜರುಗಿದ ಚುನಾವಣೆಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿದಂತೆ ಸಮಿತಿಯ ಸದಸ್ಯರಾಗಿ ಗುರುಸಿದ್ದೇಶ ಕೊತ್ತಂಬರಿ, ರಾಜೇಶಕೋರಿ ಶೆಟ್ಟರ್, ಎಸ್.ಭರಮಣ್ಣ, ಪಿ.ಜಯಂತಿಲಾಲ್ ಜೈನ್, ವೈ.ಸೋಮಶೇಖರ್, ಟಿ.ರಾಯಪ್ಪ, ಅಗಳಿ ಮೋಹನ್, ಜೋಡಿ ದೊಡ್ಡಬಸಪ್ಪ, ಟಿ.ಸೌಮ್ಯ, ಎ.ಎಂ.ಉಜ್ವಲ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಸಹಕಾರಿ ಸಂಘದ ರಿಟರ್ನಿಂಗ್ ಅಧಿಕಾರಿ ವಿ.ಲೀಲಾವತಿ ತಿಳಿಸಿದ್ದಾರೆ.






# ಅವಕಾಶಗಳಲ್ಲಿ ತಾರತಮ್ಯ ಸಲ್ಲದು

## ಸಿವಿಲ್ ನ್ಯಾಯಾಧೀಶ ಕಿಶನ್ ಬಿ. ಮಾಡಲಗಿ ಹೇಳಿಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಎಲ್ಲರೂ ಸಮಾನವಾಗಿ ಜೀವಿಸಲು ಮಾನವ ಹಕ್ಕುಗಳು ಜಾರಿಯಲ್ಲಿವೆ ಎಂದು ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಕಿಶನ್ ಬಿ. ಮಾಡಲಗಿ ಅವರು ಹೇಳಿದರು.

ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹೊಸಪೇಟೆ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಶಂಕರ ಆನಂದ ಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಮಂಗಳವಾರ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮಉದ್ಘಾಟಿಸಿ ಅವರು ಮಾತನಾಡಿದರು.



ಮಾನವ ಹಕ್ಕುಗಳು ಸಮಾಜದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಅವಕಾಶಗಳನ್ನು ನೀಡಿದ್ದು, ಯಾವುದೇ ರೀತಿಯ ತಾರತಮ್ಯ ಮಾಡಿದರೆ ಅದು ಕಾನೂನಿಗೆ ವಿರುದ್ಧವಾಗಿದೆ. ಮಾನವ ಹಕ್ಕುಗಳನ್ನು ನಮ್ಮ ಸಂವಿಧಾನದಲ್ಲಿಯೂ ಅಳವಡಿಸಿಕೊಳ್ಳಲಾಗಿದೆ. ಅಸ್ಪೃಶ್ಯತೆ ಆಚರಣೆಮಾನವ ಹಕ್ಕುಗಳ ಉಲ್ಲಂಘನೆ ಯಾಗಿದ್ದು, ಈ ಕುರಿತು ಜಾಗೃತಿ ಅತ್ಯವಶ್ಯಕ ವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಎ.ಕರುಣಾನಿಧಿ, ಶಂಕರ ಆನಂದಸಿಂಗ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಕೆ.ಶಿವಪ್ಪ ಸೇರಿದಂತೆ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೃಷಿ ಯೋಜನೆಗೆ ಮನವಿ

## ಕೃಷಿ ನಿರ್ದೇಶಕ ಶರಣಪ್ಪ ಬಿ ಮುದಗಲ್ ಹೇಳಿಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ರೈತರು 'ಕೃಷಿ ನವೋದ್ಯಮ' ಯೋಜನೆಯ ಸೌಲಭ್ಯ ಪಡೆದುಕೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಬಿ ಮುದಗಲ್ ಅವರು ತಿಳಿಸಿದ್ದಾರೆ. 2023–24ರ ಆಯವ್ಯಯ ಭಾಷಣದಲ್ಲಿ ಮುಖ್ಯಮಂತ್ರಿಗಳು "ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ವಲಯಗಳಲ್ಲಿ ನಾವೀನ್ಯತೆ ಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು 'ನವೋದ್ಯಮ ಎಂಬಹೊಸ ಯೋಜನೆ ಯನ್ನು ಘೋಷಿಸಿರುತ್ತಾರೆ.

**ಯೋಜನೆಯ ಗುರಿ:**

ಕೃಷಿ ಕ್ಷೇತ್ರದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸಲು ಹಾಗೂ ಗ್ರಾಮೀಣ ಭಾಗದ ಯುವಕರಿಗೆ ಉದ್ಯೋಗ ಸೃಜನೆಗಾಗಿ ಕೃಷಿಯಲ್ಲಿನ ನೂತನ ತಾಂತ್ರಿಕತೆಗಳು ಹಾಗೂ ನವೀನ ಪರಿಕಲ್ಪನೆಗಳ ವಾಣಿಜ್ಯೀಕರಣವನ್ನು ಉತ್ತೇಜಿಸಲು ಕೃಷಿ ನವ್ಯೋದ್ಯಮ ಕಾರ್ಯಕ್ರಮವನ್ನು ಯೋಜಿಸಲಾಗಿದೆ.

**ಉದ್ದೇಶಗಳು:**

ಕೃಷಿಯಲ್ಲಿನ ನವೀನ ತಾಂತ್ರಿಕತೆಗಳು ಹಾಗೂ ನೂತನ ಪರಿಕಲ್ಪನೆಗಳಿಂದ ಕೃಷಿಯಲ್ಲಿ ನವೋದ್ಯಮಗಳನ್ನು ಪ್ರಾರಂಭಿಸಿ ಕೃಷಿ ವಲಯದಲ್ಲಿ ಉದ್ಯಮಶೀಲತೆಯನ್ನು ಹೆಚ್ಚಿಸುವುದು. ಕೃಷಿ ಪದವೀಧರರು, ವಿದ್ಯಾವಂತ ಯುವಕರು, ಆಸಕ್ತ ಪ್ರಗತಿಪರ ರೈತರು ಕೃಷಿಯಲ್ಲಿ ನವೋದ್ಯಮ ಆರಂಭಿಸಿಸಲು ಸಹಾಯ ನೀಡಿ ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಜನೆ ಮಾಡುವುದು. ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ಅಭಿವೃದ್ಧಿಪಡಿಸಲಾದ ನೂತನ ಆವಿಷ್ಕಾರಗಳು ಹಾಗೂ ತಾಂತ್ರಿಕತೆಗಳ ವಾಣಿಜ್ಯೀಕರಣವನ್ನು ಉತ್ತೇಜಿಸುವ ಉದ್ದೇಶ ಈ ಯೋಜನೆಯದ್ದಾಗಿದೆ.

**ಯೋಜನೆಯ ಕಾರ್ಯವ್ಯಾಪ್ತಿ:**

ರೈತರ ನೂತನ ಪರಿಕಲ್ಪನೆಗಳಿಗೆ ಉತ್ತೇಜನ ನೀಡಿ ಕೃಷಿಯೊಂದಿಗೆ ಉದ್ಯಮಿಗಳಾಗಿ ಪರಿವರ್ತನೆ ಹೊಂದುವಂತೆ >>2




## ವಚನ ಅರಿವು

### ವಿರಕ್ತರು

**ವಿರಕ್ತ ವಿರಕ್ತ ಎಂಬ ಹಾದಿಕಾರರ ವಿರಕ್ತರೆನ್ನಬಹುದೆ?**
**ಕಾವಿಯ ಹೊದ್ದು ತಿರುಗುವ ಜೀವಗಳ್ಳರು ವಿರಕ್ತರೆ?**
**ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ವಿರಕ್ತರೆಂದಡೆ,**
**ಅಘೋರನರಕ ತಪ್ಪದು ಅಮುಗೇಶ್ವರಲಿಂಗವೆ.**

**– ಅಮುಗೆ ರಾಯಮ್ಮ**

ವಿರಕ್ತರೆಂದರೆ ಸರ್ವಸಂಘ ಪರಿತ್ಯಾಗಿಗಳು. ನಾನು ವಿರಕ್ತ, ನಾನು ಸ್ವಾಮಿ, ನಾನು ಮಠಾಧೀಶನೆಂದು ಹಾದಿಬೀದಿಯಲ್ಲಿ ತಿರುಗಿ, ಹಣ, ವಸ್ತು ಮುಂತಾದವುಗಳನ್ನು ಕಾಡಿಬೇಡಿ ತೆಗೆದುಕೊಳ್ಳುವವರನ್ನು ಆತ್ಮಜ್ಞಾನ ಪಡೆಯದೆ, ಅಂತರಂಗ, ಬಹಿರಂಗ ಶುದ್ಧವಿಲ್ಲದೆ, ಅನಾಚಾರದಲ್ಲಿ ತೊಡಗಿರುವವರು ಮೈ ಮೇಲೆ ಕಾವಿ ಬಟ್ಟೆಗಳನ್ನು ಉಟ್ಟು ಬಂದರೆ ವಿರಕ್ತರೆನ್ನಲಾಗದು. ಅವರು ಜೀವಗಳ್ಳರು, ದುಡಿಯದೇ ತಿನ್ನುವ ಮೋಸಗಾರರು. ಇಂಥವರು ದೊಡ್ಡ ದೊಡ್ಡ ಹೆಸರನ್ನು ಧರಿಸಿ ಸ್ವಾಮಿಗಳು, ವಿರಕ್ತರು, ಜಂಗಮರೆಂದು ತಿರುಗುವ ಬುದ್ಧಿಗೇಡಿಗಳನ್ನು ಒಪ್ಪಿಕೊಂಡು ಅವರು ಹೇಳುವುದನ್ನು ಪಾಲಿಸಿದರೆ ಬದುಕು ಅಸಂಸ್ಕೃತಿಯ ದಾರಿ ಹಿಡಿಯುತ್ತದೆ ಎಂದು ಎಚ್ಚರಿಸುತ್ತಾಳೆ ರಾಯಮ್ಮ.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ಕೃಷಿ ಯೋಜನೆಗೆ ಮನವಿ

**ಮೊದಲ ಪುಟದಿಂದ**
ಹಾಗೂ ರೈತರ ಆದಾಯ ವೃದ್ಧಿಸುವಲ್ಲಿ ಸಹಕಾರಿಯಾಗುವಂತೆ ರಾಜ್ಯಾದ್ಯಂತ ಕೃಷಿ ವಲಯದಲ್ಲಿ ನೂತನ ಆವಿಷ್ಕಾರಗಳು, ನವೀನ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿರುವ ಕೃಷಿ ನವೋದ್ಯಮಗಳಿಗೆ ಉತ್ತೇಜನ ನೀಡಲಾಗುವುದು.

**ಆರ್ಥಿಕ ನೆರವು:**
ಹೊಸ ಕೃಷಿ ನವೋದ್ಯಮಗಳಿಗೆ ಕೃಷಿ ಕ್ಷೇತ್ರದಲ್ಲಿ ನೂತನ ಪರಿಕಲ್ಪನೆಯೊಂದಿಗೆ ಆರಂಭಿಸುವ ಹೊಸ ಕೃಷಿ ನವೋದ್ಯಮಿಗಳಿಗೆ ಅನುಮೋದಿತ ಯೋಜನಾ ವರದಿಯ ಶೇ.50ರಷ್ಟು ಸಹಾಯಧನವನ್ನು (ಕನಿಷ್ಠ ರೂ. 5 ಲಕ್ಷದಿಂದ ಗರಿಷ್ಠ ರೂ. 20 ಲಕ್ಷಗಳವರೆಗೆ) ಬ್ಯಾಂಕ್ ಸಾಲದ ಮುಖಾಂತರ ಆರ್ಥಿಕ ನೆರವು ನೀಡಲಾಗುವುದು.
ಈಗಾಗಲೇ ಸ್ಥಾಪಿಸಲಾದ ನವೋದ್ಯ ಮಗಳ ವಿಸ್ತರಣೆ ಅಥವಾ ಮೇಲ್ದರ್ಜೆಗೇರಿಸಲು ಕೃಷಿ ವಲಯದಲ್ಲಿ ಈಗಾಗಲೇ ಸ್ಥಾಪಿಸಲಾದ ನವೋದ್ಯಮಗಳ ವಿಸ್ತರಣೆಗಾಗಿ ಹಾಗೂ ಉನ್ನತೀಕರಣಕ್ಕಾಗಿ ಯೋಜನಾ ವರದಿಯ ಶೇ.50ರಷ್ಟು ಸಹಾಯಧನವನ್ನು (ಕನಿಷ್ಠ ರೂ. 20 ಲಕ್ಷದಿಂದ ಗರಿಷ್ಠ ರೂ. 50 ಲಕ್ಷಗಳವರೆಗೆ) ಕೃಷಿ ವಲಯದ ನವೋದ್ಯಮಿಗಳಿಗೆ ಬ್ಯಾಂಕ್ ಸಾಲದ ಮುಖಾಂತರ ಆರ್ಥಿಕ ನೆರವು ನೀಡಲಾಗುವುದು. ಕೃಷಿ ನವೋದ್ಯಮಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದಡಿ ಆಯ್ಕೆಯಾದ ನವೋದ್ಯಮಿಗಳ ಸಾಮರ್ಥ್ಯಾಭಿವೃದ್ಧಿಗೆ ಕೃಷಿ ವಿಶ್ವವಿದ್ಯಾಲಯ, ಐ.ಸಿ.ಎ.ಆರ್., ಸಿ.ಎಫ್.ಟಿ.ಆರ್.ಐ., ಸಿ.ಎಸ್.ಐ.ಆರ್., ಸಿ–ಸಿಎಂಪಿ ಹಾಗೂ ಇತರೆ ಸಂಶೋಧನಾ ಸಂಸ್ಥೆಗಳಾದ ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಸ್ಥಾಪಿತವಾಗಿರುವ ಕೃಷಿ ನಾವೀನ್ಯತೆಗಾಗಿ ಶ್ರೇಷ್ಠತೆಯ ಕೇಂದ್ರಗಳ ಮೂಲಕ ತರಬೇತಿಗಳನ್ನು ನೀಡಲಾಗುವುದು.

**ನೋಂದಣಿ ಹಾಗೂ ಅರ್ಜಿ ಸಲ್ಲಿಸುವಿಕೆ:** ಅರ್ಜಿ ನಮೂನೆ ಹಾಗೂ ಇತರೆ ಸಂಬಂಧಿತ ಮಾಹಿತಿಗಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿಯ ಸಹಾಯಕ ಕೃಷಿ ನಿರ್ದೇಶಕ (ವಿ.ತ) ಬಿ.ಮಹಮ್ಮದ್ ಹಾರೂನ್ ರಷೀದ್ ಮೊ: 8277929662, ಇವರನ್ನು ಸಂಪರ್ಕಿಸಬಹುದಾಗಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

# ಪಿ.ಬಿ.ಶ್ರೀನಿವಾಸ್ ಮುಲಾಖತ್ತು

ನನಗೆ ಬಾಲ್ಯದಲ್ಲಿ ಸಂಗೀತದ ಅಭಿರುಚಿ ಹುಟ್ಟಿಸಿದ್ದು ಕ್ಲಾಸಿಕಲಲ್ಲ. ಜನಪದವೂ ಅಲ್ಲ. ಸಿನಿಮಾ ಸಂಗೀತ. ಅದರಲ್ಲೂ ಕನ್ನಡ ಮತ್ತು ತಮಿಳು ಹಾಡುಗಳು. ತಮಿಳಿನ ಸೌಂದರ್‌ರಾಜನ್ ಅವರ 'ಪೋನ್ನಾಲ್ ಪೋಗಟ್ಟುಂ ಪೋಡ' ಅದೆಷ್ಟು ಸಲ ಹಾಡಿರುವೆನೊ? ಇದಾದ ಎಷ್ಟೊ ದಿನಗಳ ನಂತರ ನಾನು ರಫಿ ಮುಖೇಶ್ ಲತಾ ಆಶಾ ಅವರ ಹಾಡುಗಳತ್ತ ಹೋದೆ. ಬಳಿಕ ಗುಲಾಮಲಿ ಖಾನ್, ಜಗಜೀತಸಿಂಗ್, ಮೆಹದಿ ಹಸನ್, ಬೇಗಂ ಅಖ್ತರ್ ಅವರತ್ತಲೂ; ಬಡೇಗುಲಾಮಲಿ ಖಾನ್, ಭೀಮಸೇನ ಜೋಶಿ, ನುಸ್ರತ್ ಫತೇಅಲಿ ಖಾನ್ ಅವರತ್ತಲೂ ಸರಿದೆ. ಸಂಶೋಧನೆಗೆ ಇಳಿದ ಮೇಲೆ ಮಂಟೇಸ್ವಾಮಿ, ತತ್ವಪದಕಾರರು, ಬಾವುಲ್‌ಗಾಯಕರು, ಗುರುಬಾನಿ ಹಾಡುಗಾರರು ನನ್ನೊಳಗೆ ಇಳಿದರು. ಭಾಷೆ ತಿಳಿಯದಿದ್ದರೂ, ಆಫಘನ್, ಈಜಿಪ್ತಿಯನ್, ಪಶ್ತೂನಿ, ಚೀನೀ, ಆಫ್ರಿಕನ್ ಹಾಡಿಕೆಗಳು ಇಷ್ಟವಾದವು. ಈಯೆಲ್ಲ ಸ್ತರಗಳು ಕಾಲಕ್ರಮೇಣ ಹೊರಳಿಕೆಯ ಕ್ರಮದಲ್ಲಿ ಬದಲಾದವೇ ಹೊರತು ಏರಿಕೆ ಇಳಿಕೆ ಕ್ರಮದಲ್ಲಲ್ಲ. ಹಲವು ಭಾಷಿಕ ದೇಶಿಕ ಪದ್ಧತಿಯ ಸಂಗೀತಗಳೊಳಗೆ ಭೇದವಿಲ್ಲದೆ, ಸಂಚಾರ ಮಾಡುತ್ತ ನಾದವನ್ನು ನಾನು ಆಸ್ವಾದಿಸುತ್ತೇನೆ.

ಈ ಬಹುರೂಪೀ ಸಂಗೀತಲೋಕಕ್ಕೆ ಪ್ರವೇಶ ಸಿಕ್ಕಿದ್ದು ಮಾತ್ರ ಕನ್ನಡ ಸಿನಿಮಾ ಗೀತೆಗಳಿಂದ. ಸುಶೀಲಾ ಜಾನಕಿ ಪಿ.ಬಿ. ಶ್ರೀನಿವಾಸ್ ನಮಗೆ ದೇವತೆಗಳಾಗಿದ್ದರು. ಬಾಲ್ಯದಲ್ಲಿ ರಾಜಕುಮಾರ್ ತಮ್ಮ ಹಾಡುಗಳನ್ನು ಸ್ವತಃ ಹಾಡುತ್ತಾರೆಂಬ ಕಲ್ಪನೆಯಿತ್ತು. ಅವರದು ತುಟಿಚಲನೆ ಮಾತ್ರ, ಹಿನ್ನೆಲೆಯಲ್ಲಿ ಹಾಡುವವರು ಶ್ರೀನಿವಾಸ್ ಎಂದು ತಿಳಿದು ಭ್ರಮ ನಿರಸನವಾಯಿತು. ನಮ್ಮ ನೆಚ್ಚಿನ ಹಾಡುಗಾರರ ಮನೆಮಾತು ತಮಿಳು ತೆಲುಗು ಎಂದು ಗೊತ್ತಾದಾಗಲೂ ಆಘಾತವೇ ಆಗಿತ್ತು. ಆದರೆ ಈ ನಿರಸನ–ಆಘಾತಗಳನ್ನು ದಾಟಿ ಕನ್ನಡ ಸಿನಿಮಾ ಗಾಯಕರನ್ನು ನಮ್ಮೆದೆಯಲ್ಲಿ ಸ್ಥಾಪಿಸಿಕೊಂಡೆವು. ರಾಜಕುಮಾರ್ ಸ್ವತಃ ತಮ್ಮ ನಟನೆಗೆ ತಾವೇ ಹಾಡತೊಡಗಿದಾಗ, ಅವರ ಕೊರಳನ್ನು ಶ್ರೀನಿವಾಸ್ ಹಾಡಿಕೆಯಿಂದ ಬೇರೆಮಾಡಿ ಸ್ವೀಕರಿಸುವುದು ಕಷ್ಟವಾಯಿತು. ನನ್ನ ತಲೆಮಾರಿನ ಅನೇಕರು ತರಗತಿಗಳಲ್ಲಿ ಹೊಲಗದ್ದೆಗಳಲ್ಲಿ, ಸ್ಪರ್ಧೆಗಳಲ್ಲಿ, ಬಚ್ಚಲುಮನೆಯಲ್ಲಿ ಶ್ರೀನಿವಾಸರ ಹಾಡುಗಳನ್ನು ಹಾಡುತ್ತಿದ್ದರು. 'ಆಕಾಶವೇ ಬೀಳಲಿ ಮೇಲೆ' 'ಬಾರೇ ಬಾರೇ ಚಂದದ ಚೆಲುವಿನ ತಾರೆ' ಶ್ರೀನಿವಾಸರ ಸಹಜದನಿಯ ಇಂಪಾದ ಹಾಡುಗಳಲ್ಲಿ ಕೆಲವು. ನಾವು ಒಂದಲ್ಲಾ ಒಂದು ದಿನ ನಮ್ಮ ಜೀವನ ಸಂಗಾತಿಯನ್ನು ಹೀಗೇ ನದಿತೀರದಲ್ಲಿ ಕೈಕೈಹಿಡಿದು ಹಾಡಬೇಕೆಂಬ ಉತ್ಕಟ ಬಯಕೆ ಹುಟ್ಟಿಸಿದ ಹಾಡು ಮತ್ತು ದೃಶ್ಯಾವಳಿ ಈ ಚಿತ್ರಗಳಲ್ಲಿದೆ.

ಶ್ರೀನಿವಾಸ್ ಅವರನ್ನು ಒಮ್ಮೆ ಜೀವನದಲ್ಲಿ ಭೇಟಿಯಾಗಬೇಕೆಂದು ಆಸೆಯಿತ್ತು. ಅಮೀರಬಾಯಿ ಕರ್ನಾಟಕಿ ಪುಸ್ತಕ ಬರೆಯುವಾಗ, ಹಳೆಯ ಹಾಡುಗಳ ಸಂಗ್ರಹವುಳ್ಳ ಒಬ್ಬ ಪ್ರಸಿದ್ಧ ರೆಕಾರ್ಡರ್ ಅವರ ಭೇಟಿಗೆಂದು ಮದರಾಸಿಗೆ ಹೋದೆ. ಆಗ ಪಿಬಿಯವರನ್ನು ಕಾಣುವ ಅವಕಾಶ ಸಿಕ್ಕಿತು. ಕರೆ ಮಾಡಿದೆ. ಸಂಜೆ ಮೈಲಾಪುರದಲ್ಲಿರುವ ವುಡ್‌ಲ್ಯಾಂಡ್ ಹೋಟೆಲಿಗೆ ಬರಲು ಹೇಳಿದರು. ಹೊತ್ತಿಗೆ ಮುಂಚೆಯೇ ಹೋಟೆಲಿಗೆ ಹೋಗಿ ಕಾದುಕೊಂಡಿದ್ದೆ. ಶ್ರೀನಿವಾಸ್ ಪ್ರತಿದಿನ ಸಂಜೆ 5ಗಂಟೆ ಸುಮಾರಿಗೆ ಅಲ್ಲಿಗೆ ಬಂದು, ಅಭಿಮಾನಿಗಳನ್ನು ಭೇಟಿ ಮಾಡುವ ಪದ್ಧತಿ ಇರಿಸಿಕೊಂಡಿದ್ದರು. ಮೂಲೆಯಲ್ಲಿ ಅವರಿಗಾಗಿಯೇ ಮೀಸಲಾದ ಜಾಗವಿತ್ತು.

ಸರಿಯಾದ ಸಮಯಕ್ಕೆ ಅಂಬಾಸಡರ್ ಕಾರಿಳಿದು ಅದುರುತ್ತ ನಿಧಾನವಾಗಿ ಶ್ರೀನಿವಾಸ್ ಬಂದರು. ಹಣೆಗೆ ತಮಿಳುನಾಡಿನ ಶ್ರೀವೈಷ್ಣವ ಸಂಸ್ಕೃತಿಯ ಪ್ರತೀಕವಾಗಿ ಅಯ್ಯಂಗಾರ್ ನಾಮ. ತಲೆಯ ಮೇಲೆ ಮೈಸೂರು ಪೇಟ. ದಪ್ಪಗಾಜಿನ ಕರ್ನಾಟಕ. ಕಿಸೆಯಲ್ಲಿ ಆರು ಪೆನ್ನುಗಳು.





**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

ಮಧುರವಾದ ಗಂಡುಸ್ವರದ ಹಾಡುಗಳನ್ನು ನುಡಿಸಿದ ಕಂಠಕ್ಕೂ, ಅದರ ಒಡೆಯನಾದ ವ್ಯಕ್ತಿಗೂ ಯಾವ ಸಂಬಂಧವೂ ಇಲ್ಲದಂತೆ, ವಯಸ್ಸು ಅವರನ್ನು ಹಣ್ಣಾಗಿಸಿತ್ತು. ಅಮೀರ್‌ಬಾಯಿ ಅವರನ್ನು ಅವರು ಕಂಡಿದ್ದರು.

ಪಿ.ಬಿ.ಎಂದರೆ ಪ್ರತಿವಾದಿ ಭಯಂಕರ. ಇದು ಸಂಬಂಧ ದ್ವೈತ ಅದ್ವೈತ ವಿಶಿಷ್ಟಾದ್ವೈತ ಮತಗಳ ನಡುವೆ, ತಮ್ಮ ಸಿದ್ಧಾಂತ ವೇ ಶ್ರೇಷ್ಠವೆಂದು ಪ್ರತಿಪಾದಿಸುವ, ಎದುರಾಳಿಯನ್ನು ಸೋಲಿಸುವ ಆಕ್ರಮಣಕಾರಿ ಪದ್ಧತಿಯಿದ್ದ ಕಾಲದಲ್ಲಿ ರೂಪುಗೊಂಡ ಬಿರುದು. ಇಂತಹ ಮತೀಯ ವಾಗ್ವಾದಗಳ ಬಿರುಸಿನ ಕದನಗಳನ್ನು ಎಂ.ಎಸ್. ಪುಟ್ಟಣ್ಣನವರ 'ಕುಣಿಗಲ್ ರಾಮಶಾಸ್ತ್ರಿಗಳ ಜೀವನ ಚರಿತ್ರೆ'ಯಲ್ಲಿ ನಾನು ಓದಿದ್ದೆ. ಆದರೆ ಶ್ರೀನಿವಾಸ್ ಪ್ರತಿವಾದಿಗಳನ್ನು ಒಲಿಸಿಕೊಳ್ಳುವ ಕೋಮಲ ಮನಸ್ಸಿನ ವ್ಯಕ್ತಿಯಾಗಿದ್ದರು. ಹಲವು ಭಾಷೆಗಳನ್ನು ಕಲಿಯುವ, ಹಲವು ಧರ್ಮದ ಜನರನ್ನು ಪ್ರೀತಿಸುವ, ಹಲವು ಪ್ರಾಂತ್ಯಗಳಲ್ಲಿ ವಾಸಮಾಡುವ ಬಹುತ್ವವಾದಿಯಾಗಿದ್ದರು. ಆಂಧ್ರದಲ್ಲಿ ಹುಟ್ಟಿದ ಅವರು ತಮಿಳುನಾಡಿನಲ್ಲಿದ್ದು ಕನ್ನಡದ ಹಾಡುಗಳನ್ನು ಹಾಡುತ್ತಿದ್ದರು. ಅವರು ಹಿಂದಿ ಸಿನಿಮಾದಲ್ಲಿ ಪ್ರವೇಶ ಪಡೆಯಲೆಂದೇ ಉರ್ದು ಕಲಿತಿದ್ದರು. ತಮ್ಮ ಡೈರಿ ತೆಗೆದು ಅದರಲ್ಲಿ ಉರ್ದು ಲಿಪಿಯಲ್ಲೇ ಬರೆದಿರುವ ಹಾಡುಗಳನ್ನು ತೋರಿಸಿದರು. ಅವರಲ್ಲಿ ಮುಂಬೈನ ಹಿಂದಿ ಚಲನಚಿತ್ರ ರಂಗವು ದಕ್ಷಿಣದ ಗಾಯಕರನ್ನು ಹಿಂದಿ ಬಾರದವರೆಂದು ದೂರವಿಡುತ್ತಿದ್ದುದರ ಬಗ್ಗೆ ಬೇಸರವಿತ್ತು.

ಶ್ರೀನಿವಾಸ್ ಅವರು ಎರಡು ಪ್ಲೇಟ್ ಬಾಳೆಕಾಯಿ ಬಜ್ಜಿ ಮತ್ತು ಕಾಫಿಗೆ ಆರ್ಡರ್ ಮಾಡಿದರು. ಅದನ್ನು ಬಿಸಿಯಾಗಿರುವಾಗಲೆ ಚೂರುಚೂರು ಮುರಿದು ಮೆಲ್ಲುತ್ತ ಮಾತಾಡುತ್ತ ಹೋದರು. ಮದರಾಸಿನ ಸೆಕೆಗೊ ಕಾಫಿಯ ಹಬೆಗೊ ಅವರ ಹಣೆಯ ಮೇಲಿನ ಕೆಂಪುಗೀಟು ಮೆಲ್ಲಗೆ ಕರಗಿ ಮೂಗಿನ ಬಡ್ಡೆಗೆ ಇಳಿಯುತ್ತಿತ್ತು. ನಾವು ಬಹಳ ಇಷ್ಟಪಡುವ ಆರಾಧಿಸುವ ವ್ಯಕ್ತಿಗಳ ಜತೆ ಅವರ ನೆನಪಿನ ಶಕ್ತಿ ಕ್ಷೀಣವಾದಾಗ ಅವರ ದನಿ ಉಡುಗಿದಾಗ, ಭೇಟಿಯಾಗುವಾಗ, ಒಂದು ಬಗೆಯ ನಿರಾಶೆಯೂ ಪ್ರೀತಿಯೂ ಮರುಕವೂ ಉದ್ದೀಪ್ತವಾಗುತ್ತದೆ. ಭೇಟಿಯಿಲ್ಲದೆ ಹಳೆಯ ನೆನಪುಗಳ ಜತೆಗೇ ಬದುಕಿದ್ದರೆ ಚೆನ್ನಾಗಿತ್ತೇನೋ ಅನಿಸುತ್ತದೆ. ನಾನು ಗೌರೀಶ ಕಾಯ್ಕಿಣಿಯವರನ್ನು ಗೋಕರ್ಣದಲ್ಲಿ ಕಂಡಾಗಲೂ ಹೀಗೇ ಅನಿಸಿತ್ತು. ಕಾಲ ಮಾಡುವ ಊಹಾತೀತ ಪರಿವರ್ತನೆಗಳನ್ನು ಎದುರಿಸುವ ತಾಕತ್ತು ಸಿದ್ಧತೆ ನಮ್ಮಲ್ಲಿ ಇಲ್ಲದಿರುವುದೂ ಇಂತಹ ಭಾವನೆಗೆ ಕಾರಣವಿರಬೇಕು. ಕಲಾವಿದರನ್ನು ಬಿಟ್ಟು ಅವರ ಬರೆಹ ಹಾಡಿಕೆಗಳ ಜತೆಗಿನ ಅನುಸಂಧಾನವೇ ಸರಿಯಾದ ಕ್ರಮವೆನಿಸುತ್ತದೆ.

ಇವತ್ತೂ ಶ್ರೀನಿವಾಸ್ ಮತ್ತು ಜಾನಕಿ ಹಾಡುಗಳೆಂದರೆ, ನನ್ನ ಹಳೆಯ ದಿನಗಳ ಭಾವಲೋಕಕ್ಕೆ ಸರರನೆ ಜಾರಿ ಹೋಗುವಂತಾಗುತ್ತದೆ.

# ಒಳಗಿರುವ ಆತ್ಮ ಹೆಣ್ಣು ಅಲ್ಲಾ ಗಂಡು ಅಲ್ಲಾ... ಅದು..... !

ಆತ್ಮ ತತ್ವಕ್ಕೆ ಇರದ ಭೇದಭಾವ ಸಾಮಾನ್ಯ ಮನುಷ್ಯನಿಗೆ ಯಾಕೆ? ಪ್ರಕೃತಿಯಲ್ಲಿ ಇರುವ ಎಲ್ಲ ಜಿವರಾಶಿಗಳಲ್ಲಿ ಹೆಣ್ಣು ಗಂಡು ಎಂಬ ಎರಡು ಜಾತಿ ಮಾತ್ರಾ ಇರೋದು.. ಹೆಣ್ಣು ಮತ್ತು ಗಂಡಿನ ಪಾತ್ರ ಸಮಾನವಾಗಿದೆ, ಒಬ್ಬರಿಗೊಬ್ಬರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಅವಲಂಬಿತರಾಗಿದ್ದಾರೆ, ಹೆಣ್ಣು ಮತ್ತು ಗಂಡಿನ ನಡುವೆ ಸಮಾನತೆ ಇದೆಯಾ..? ಈಗಲೂ ಈ ಪ್ರಶ್ನೆ ಕಗ್ಗಂಟಿನಂತ್ತೆ ಕಾಡುತ್ತದೆ.. ಮೊನ್ನೆ ಪ್ರಭಾವಿ ವ್ಯಕ್ತಿ ಸಮಾಜ ಸುಧಾರಕರೊಬ್ಬರ ಮನೆಯಲ್ಲಿ ಹೆಣ್ಣು ಮಗುವಿನ ಜನನ ಆದಾಗ ಅಲ್ಲಿ ಬಂದ ಪ್ರಶ್ನೇ ಏನು ಗೊತ್ತೆ..?
ಓ ಹೆಣ್ಣು ಮಗು ಜನಿಸಿದೆಯಾ! ಹೆಣ್ಣು ಹೆಚ್ಚಿನ ವಿದ್ಯಾಭ್ಯಾಸ ಮುಗಿಸಿದರೆ ಇವಳಿಗೆ ತಕ್ಕ ವರ ಎಲ್ಲಿ ಹುಡುಕೋದು? ಮಕ್ಕಳಾದರೆ ನೌಕರಿ ಬಿಡು.. ನೌಕರಿಯಲ್ಲಿ ಬಡ್ತಿ ಪಡೆದರೆ ಏನೊ ಮಾಡಿ ಪ್ರಮೋಶನ್ ಗಿಟ್ಟಿಸಿದ್ದಾಳೆ.. ಸಮಾಜ ಸೇವೆಯಲ್ಲಿ ತೊಡಗಿದರೆ ಏನೊ ಗಮತ್ತು ಮಾಡಿದ್ದಾಳೆ. ಎಲ್ಲರೊಂದಿಗೆ ಒಳ್ಳೆಯ ಬಾಂಧವ್ಯ ಹೊಂದಿದ್ದರೆ ಇವಳ ನಡತೆ ಸರಿ ಇಲ್ಲ.. ಚಿತ್ರ ರಂಗದಲ್ಲಿ ಬೆಳೆದರೆ ಸೌಂದರ್ಯವೆ ಇವಳ ಅಸ್ತ್ರ.. ರಾಜಕೀಯ ರಂಗದಲ್ಲಿ ಕಾಲಿಟ್ಟರಂತ್ತು ಮುಗಿತು ಕಥೆ.... ವಿಪರ್ಯಾಸ ಎಂದರೆ ಹೆಣ್ಣಿನ ಸ್ಥಿತಿ ಈಗಲೂ ಚಿಂತಾಜನಕ.. ಒಂದೇ ಎರಡೆ.. ಈಗಲೂ ಪುರುಷ ಪ್ರಧಾನ ಸಮಾಜ ಇದೆ ಎನ್ನುವುದರಲ್ಲಿ ಸಂದೇಹವಿಲ್ಲ. ಈ ಪ್ರಪಂಚ ನಾವು ಅಂದುಕೊಂಡಷ್ಟು ಸರಳ ಇಲ್ಲವೇ ಇಲ್ಲ... ಹೆಣ್ಣು ಅಡುಗೆ ಮನೆಯಲ್ಲಿ ಮಾತ್ರ ಇದ್ದು ಮಕ್ಕಳ ಲಾಲನೆ ಪಾಲನೆ ಹಾಗೂ ಕುಟುಂಬ ನಿಭಾಯಿಸಿದರೆ ಸಾಕು ಎನ್ನುವ ಮನೋಧೋರಣೆ ಹೊಂದ್ದಿರುವ ಶೇಕಡಾ 90% ಪ್ರತಿಶತ ಕುಟುಂಬಗಳು ಈಗಲೂ ಇರುವುದು



ವಿಷಾದನೀಯ ಸಂಗತಿ.
700 ಕೋಟಿ ಕನ್ನಡಿಗರಲ್ಲಿ 350 ಕೋಟಿ ಮಹಿಳೆಯರು ಇರುವ ನಮ್ಮ ರಾಜ್ಯದಲ್ಲಿ ಪುರುಷರಿಗೆ ಸಮಾನ ಅವಕಾಗಳನ್ನು ಗಿಟ್ಟಿಸಿಕೊಂಡ ಮಹಿಳೆಯರು ಕೇವಲ ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಪುರುಷ ತಾನು ಅನುಭವಿಸುವ ಭೋಗಗಳಲ್ಲಿ ಸ್ತ್ರೀ ಕೂಡಾ ಒಬ್ಬಳು ಎನ್ನುವ ಭಾವನೆ ಈಗಲು ನೋಡುತ್ತಿದ್ದೇವೆ.ಓಬ್ಬ ಮಹಾನ್ ಮೇಧಾವಿ ಪುರುಷ ಹೇಳಿದನಂತೆ "ವೇಶ್ಯಾವಾಟಿಕೆಗಳು ಇರುವ ದೇಶಗಳಲ್ಲಿ ಅನೈತಿಕ ಚಟುವಟಿಕೆಗಳು ನಿಯಂತ್ರಣದಲ್ಲಿ ಇವೆ "..... ಎಂಬುದು ಕೇಳಿ ಬಂತು,ವಿಪರ್ಯಾಸ ನೋಡಿ ಅಲ್ಲಿ ನೊಂದು ಬೆಂದು ಕಾಮದಾಹಕ್ಕೆ ಬಲಿಯಾಗುತ್ತಿರುವ ಹೆಣ್ಣು ಯಾವದೋ ಕುಟುಂಬದ ಮಗು,ಸಹೋದರಿ, ಹೆಂಡತಿ, ತಾಯಿ ಎನ್ನುವುದನ್ನು ಮರೆತೆ ಬಿಟ್ಟಿದ್ದಾರೆ ಹಾಗೆಯೆ ಇತ್ತೀಚಿನ ದಿನಗಳಲ್ಲಿ ಸರಕಾರಿ ಶಾಲೆಗಳಲ್ಲಿ ಶೇಕಡಾ ನೂರಕ್ಕೆ 90% ಪ್ರತಿಶತ ಸುಧಾರಣೆ ಕಾಣುತ್ತಿರುವುದು ಮಹಿಳಾ ಶಿಕ್ಷಕಿರರು ಹೆಚ್ಚಿನ ಸಂಖ್ಯೆಯಲ್ಲಿ ಬೋಧನೆ ಮಾಡುತ್ತಿರುವುದರಿಂದ.
ಯಾವ ಇಲಾಖೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಇರುತ್ತಾರೆಯೋ ಆ ಇಲಾಖೆಯ ಕಾರ್ಯ ಚಟುವಟಿಕೆಗಳು ಅಚ್ಚುಕಟ್ಟಾಗಿ ನಡೆಯುತ್ತಿದರುವದು ಒಳ್ಳೆಯ ಸಂಗತಿ.

ಎಂತಹ ಉನ್ನತ ಹುದ್ದೆ ಅಲಂಕರಿಸಿದರು ಮಹಿಳೆ ಯಾವತ್ತು ತನ್ನ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಮರೆಯುವುದಿಲ್ಲ ಅಚ್ಚುಕಟ್ಟಾದ ಜೀವನ ಶೈಲಿ ಅನುಸರಿಸುತ್ತಲೆ ಬಂದಿದ್ದಾಳೆ.
ಅಡುಗೆಮನೆಯಿಂದ ಮಂಗಳ ಯಾನದವರೆಗೂ ಪುರುಷರ ಹೆಗಲಿಗೆ ಹೆಗಲು ಕೊಟ್ಟು ವೃತ್ತಿ ಹಾಗೂ ಪ್ರವೃತ್ತಿಯಲ್ಲಿ ಸಾಧನೆಗೈಯುತ್ತಿರುವುದು ದೇಶದ ಪ್ರಗತಿಗೆ ಪೂರಕ .. ಆದರೂ ಎಲ್ಲ ಇಲಾಖೆಗಳಲ್ಲಿ ಹೆಣ್ಣಿಗೆ ಆಗುತ್ತಿರುವ ಶೋಷಣೆ, ನಿಂದನೆಗಳು ಈವತ್ತಿಗೂ ಕಮ್ಮಿ ಇಲ್ಲ...
ಏನೇ ಇರಲಿ ಈ ಕಲಿಯುಗದಲ್ಲಿ ಸಮಾನ ಅವಕಾಶಗಳನ್ನು ಗಿಟ್ಟಿಸಿಕೊಳ್ಳುವುದು ನಮ್ಮ ಹಕ್ಕು. ನಮಗೆ ನಿಂದನೆಗಳು, ಅವಮಾನಗಳು, ಅಪಪ್ರಚಾರಗಳು ಬರುತ್ತಿರುತ್ತವೆ ಹಾಗಂತ ನಮ್ಮ ಹೋರಾಟ ನಮ್ಮ ಕಾರ್ಯಚಟುವಟಿಕೆಗಳನ್ನು ಬಿಟ್ಟುಕೊಡಬಾರದು... ನಾವು ಪ್ರಾಮಾಣಿಕ ಸೇವೆ ಮಾಡುತ್ತಿರಬೇಕಾದರೆ ಯಾರಿಗೂ ಯಾವುದಕ್ಕೂ ಭಯಪಡುವ ಅಗತ್ಯವಿಲ್ಲ ಎನಿಸುತ್ತದೆ..
ಮಹಿಳೆಯರಿಗೊಂದು ಕಿವಿ ಮಾತು ಒಂದು ಹೆಣ್ಣು ಪ್ರಗತಿಯತ್ತ ದಿಟ್ಟ ಹೆಜ್ಜೆ ಹಾಕುತ್ತಿರಲು ಅವಳಿಗೆ ಹೆಣ್ಣಿನಿಂದಲೆ ಪ್ರೋತ್ಸಾಹ ಸಿಕ್ಕಿದ್ದೆ ಆದರೆ ಯಾವ ಭಯವು ಇಲ್ಲದೆ ಎಲ್ಲ ಕ್ಷೇತ್ರಗಳಲ್ಲಿಯೂ ಪುರುಷರಿಗೆ ಸಮಾನ ಸ್ಥಾನಮಾನ ಗಿಟ್ಟಿಸುವಲ್ಲಿ ಸಂದೇಹವೇ ಇಲ್ಲ.......

**ನಂದಿನಿ ಸಾನಬಾಳ**
**ಶಿಕ್ಷಕಿ, ಗುಲ್ಬರ್ಗ**



## ಕವಿ ಮನಸು

### ಹೀಗೊಂದು ಸನ್ಮಾನದ ಕರೆ

ಉದಯದಲಿ ಚರವಾಣಿ ರಿಂಗಣಿಸಿ
ಎಡೆಬಿಡದೆ
ಮೊದಲದನು ಹಿಡಿದಿದ್ದೆ ಗುಂಡಿಯೊತ್ತಿ
ತೊದಲುತ್ತ ನುಡಿದಿದ್ದ ಹಲವಾರು
ವಿಷಯಗಳ
ಮೊದಲಾಯ್ತು ಮಾತುಗಳು ಸುತ್ತಿಬಳಸಿ

ಚೊಕ್ಕದಿಹ ರಂಗದಲಿ ಸನ್ಮಾನ ಮಾಡಿಸುವೆ
ಕಿಕ್ಕಿರಿದು ಜನ ನಿಂತು ನೋಡುವಂತೆ
ರೊಕ್ಕವನು ಒಂದಿಷ್ಟು ತಳ್ಳಿಬಿಡಿ ನನ್ನೆಡೆಗೆ
ಮಿಕ್ಕ ಹೊಣೆ ನನಗಿರಲಿ ಬೇಡ ಚಿಂತೆ

ಚಾಡಿ ಹೇಳುವರುಂಟು ನಮ್ಮ ದೂಷಣೆ
ಗೈದು
ಬೇಡ ನಮ್ಮಲ್ಲಿ ನಿಮಗೆ ಅನುಮಾನ
ನೋಡುತಿರಿ ನಿಮಗಲ್ಲಿ ವೈಭವದ ಸನ್ಮಾನ
ಮಾಡಿಸುವೆ ರಂಗದಲಿ ನಿಮ್ಮ ಗುಣಗಾನ

ಕಳಿಸಿಬಿಡಿ ನಿಮ್ಮೆಲ್ಲ ಸಾಧನೆಯ ಪಟ್ಟಿಯನು
ಕಳವಳವ ಪಡಬೇಡಿ ಹಿತರು ನಾವು
ಚಳಿಯೆಂದು ಮನೆಯೊಳಗೆ ಗುಡಿಹೊದ್ದು
ಮಲಗಿದರೆ
ಬೆಳಕನ್ನು ಕಾಣುವುದು ಹೇಗೆ ನೀವು

ನುಡಿದಿರುವೆ ಅವನಲ್ಲಿ ಬೇಕಿಲ್ಲ ಸನ್ಮಾನ
ಬಿಡಬೇಡ ಹಳಿಯಿರದ ರೈಲು ಬಂಡಿ
ಕಡೆಗೊಮ್ಮೆ ಹೇಳಿಬಿಡು ಚರವಾಣಿ
ಸಂಖ್ಯೆಯನು
ಪಡೆದಿರುವೆ ಯಾರಿಂದ ಯಾರು
ಕೊಂಡಿ?

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಕನ್ನಡಿ



ವ್ಯಕ್ತಿಯಲ್ಲಿನ ಕಲಾವಿದನನ್ನು ತೋರುವ
ಕನ್ನಡಿ
ಹಲವರ ಯಶಸ್ವಿ ಕಥೆಗಳಿಗೆ ನೀನೆ
ಮುನ್ನುಡಿ
ಸೋತೆ ಎಂದಾಗ ಧೈರ್ಯ ತುಂಬುವ
ಒಡನಾಡಿ
ನಿನ್ನಂತ ಒಬ್ಬ ಗೆಳೆಯನಿದ್ದರೆ ನಾ ಆಗುವೆ
ಬಾನಾಡಿ.

ಮಂಜುಶ್ರೀ ಮುರಳೀಧರ್.
ತೋರಣಗಲ್ಲು, ಬಳ್ಳಾರಿ.

## ತುಂಗಭದ್ರಾ ನೀರಿನ ಮಟ್ಟ



| ಬುಧವಾರ : 20-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.94 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 1295 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.980 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.13 ಅಡಿ |
| ಒಳ ಹರಿವು | 3176 ಕ್ಯುಸೆಕ್ |
| ಹೊರ ಹರಿವು | 7336 ಕ್ಯುಸೆಕ್ |
| ಸಾಮರ್ಥ್ಯ | 83.671 ಟಿಎಂಸಿ |

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬಾಲ್ಯ ವಿವಾಹ ನಿರ್ಮೂಲನೆಗೆ ಸಹಕರಿಸಿ

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಮನವಿ। ರಾಜ್ಯಮಟ್ಟದ ಕಾರ್ಯಾಗಾರ

■ ಹಂಪಿ ಟೈಮ್ಸ್ ಬಳ್ಳಾರಿ

ಸಮುದಾಯಗಳಲ್ಲಿ ಬಾಲ್ಯ ವಿವಾಹ ಮತ್ತು ದೇವದಾಸಿ ಪದ್ಧತಿ ತಡೆಗಟ್ಟುವಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು ಮತ್ತು ವಿವಿಧ ಇಲಾಖೆಗಳ ಸಹಕಾರ ಅಗತ್ಯ ಇದೆ ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ಹೇಳಿದರು.

ರೀಡ್ಸ್ ಸಂಸ್ಥೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಸಿಎಸಿಎಲ್ ಕರ್ನಾಟಕ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಬಿಡಿಎ ಫುಟ್‌ಬಾಲ್ ಮೈದಾನ ವೇದಿಕೆ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಬಾಲ್ಯವಿವಾಹ ಮತ್ತು ದೇವದಾಸಿ ಪದ್ಧತಿಯ ತಡೆಗಟ್ಟುವಲ್ಲಿನ ಸವಾಲುಗಳು ಮತ್ತು ಪರಿಹಾರ ಕುರಿತ ರಾಜ್ಯಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಶಕ್ತ ಭಾರತ ನಿರ್ಮಾಣ ಮಾಡಲು ಕೇಂದ್ರ ಸರ್ಕಾರವು 2030ರ ವೇಳೆಗೆ ಬಾಲ್ಯ ವಿವಾಹ ಮುಕ್ತ ಮಾಡಲು ಪಣ ತೊಟ್ಟಿದೆ. ಅದೇರೀತಿಯಾಗಿ ಸಮುದಾಯ, ಸಂಘಟನೆಗಳು, ಪೋಷಕರು, ಎಲ್ಲಾ ಸರ್ಕಾರಿ ಇಲಾಖೆಗಳ ಜೊತೆಗೂಡಿ ರಾಜ್ಯವನ್ನು ಬಾಲ್ಯ ವಿವಾಹ ಮುಕ್ತ ಮಾಡಲು ಸಮನ್ವಯ ಸಾಧಿಸುವ ಅಗತ್ಯವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹಗಳು ಹೆಚ್ಚಾಗುತ್ತಿದ್ದು, ಇದರ ವಿರುದ್ಧ ಗ್ರಾಮ ಪಂಚಾಯತ್ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಮಕ್ಕಳ ಕಾವಲು ಸಮಿತಿಗಳನ್ನು ರಚಿಸಿ ಅನುಷ್ಠಾನ ಮಾಡಬೇಕು. ವಿವಿಧ ಇಲಾಖೆಯಿಂದ ನೇಮಿಸಿದ ಬಾಲ್ಯವಿವಾಹ ನಿಷೇಧಾಧಿಕಾರಿಗಳು ಸಮನ್ವಯ ಸಾಧಿಸಿ ಬಾಲ್ಯವಿವಾಹಗಳನ್ನು ತಡೆಗಟ್ಟುವಲ್ಲಿ ಶ್ರಮವಹಿಸಬೇಕು ಎಂದು ತಿಳಿಸಿದರು.




ಆಡುತ್ತ ತಮ್ಮ ಬಾಲ್ಯವನ್ನು ಅನುಭವಿಸಬೇಕಿದ್ದ ಮಕ್ಕಳು ಬಾಲ್ಯ ವಿವಾಹವೆಂಬ ಸುಳಿಗೆ ಸಿಲುಕುತ್ತಿದ್ದಾರೆ. ಬಾಲ್ಯ ವಿವಾಹದಿಂದ ಮಕ್ಕಳ ಹಕ್ಕುಗಳಿಗೆ ಚ್ಯುತಿ ಬಾರದಂತೆ ತಡೆಯಬೇಕು, ಪೋಷಕರಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯ ಬಗ್ಗೆ ಅರಿವು ಮೂಡಿಸಿ ಬಾಲ್ಯ ವಿವಾಹವನ್ನು ತೊಲಗಿಸಬೇಕು ಎಂದು ಸರ್ಕಾರೇತರ ಸಂಘ ಸಂಸ್ಥೆಗಳ ಸ್ವಯಂ ಸೇವಕರಿಗೆ ಕಿವಿಮಾತು ಹೇಳಿದರು.

ರಾಜ್ಯದಲ್ಲಿ 28,657 ಪ್ರಕರಣಗಳು ಬಾಲ್ಯವಿವಾಹವಾದ ಗರ್ಭಿಣಿಯರಿದ್ದಾರೆ. ಅದೇ ರೀತಿಯಾಗಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 62 ಸಾವಿರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂದು ವಿಷಾದ ವ್ಯಕ್ತಪಡಿಸಿದರು.

ರೀಡ್ಸ್ ಸಂಸ್ಥೆಯ ಅಧ್ಯಕ್ಷ ಬಿ.ಸಿದ್ದರಾಮಯ್ಯ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಬಾಲ್ಯ ವಿವಾಹ ಮತ್ತು ದೇವದಾಸಿ ಪದ್ಧತಿಗಳಿಗೆ ಮೂಲ ಕಾರಣ ಬಡತನ. ಸರ್ಕಾರವು ಬಡತನ ನಿರ್ಮೂಲನೆಗಾಗಿ ಸಾಕಷ್ಟು ಶ್ರಮಿಸುತ್ತಿದೆ. ಮನುಷ್ಯ ಬುದ್ಧಿ ಜೀವಿಯಾಗಿದ್ದು, ಜ್ಞಾನ ಮತ್ತು ವಿಚಾರಧಾರೆಗಳನ್ನು ಅಳವಡಿಸಿಕೊಳ್ಳಬೇಕು; ಅಂದಾಗ ಮಾತ್ರ ಮೂಢನಂಬಿಕೆ ತೊಲಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳ ವಿವಿಧ ವಿಚಾರಗಳನ್ನು ಅಭಿವೃದ್ಧಿ ಸೂಚಕಗಳಾಗಿ ಇಟ್ಟುಕೊಂಡು, ಚಿಕ್ಕ ಚಿಕ್ಕ ಜನಸಮುದಾಯಗಳ ವಾರ್ಡ್ ಮಟ್ಟ ಮಕ್ಕಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಕಂಡುಕೊಂಡು, ಅವುಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಬೇಕು. ಇದರಿಂದ ಗ್ರಾಮ ಪಂಚಾಯಿತಿಗಳು 'ಮಕ್ಕಳ ಸ್ನೇಹಿ' ಆಗುತ್ತವೆ ಎಂದು ಅಭಿಮತ ವ್ಯಕ್ತ ಪಡಿಸಿದರು.

ರೀಡ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸಿ.ತಿಪ್ಪೇಶಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಕ್ಕಳ ಹಕ್ಕುಗಳನ್ನು ಉತ್ತೇಜಿಸುವುದು ಮತ್ತು ರಕ್ಷಿಸುವುದು, ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ದೇವದಾಸಿ ಪದ್ಧತಿ ಹಾಗೂ ಲಿಂಗತಾರತಮ್ಯ ನಿರ್ಮೂಲನೆ ಕುರಿತ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಾಗಾರ ಹಮ್ಮಿಕೊಂಡಿದ್ದು, ಇದರ ಉದ್ದೇಶಗಳನ್ನು ಸ್ವಯಂ ಸೇವಾ ಸಂಸ್ಥೆಗಳು ಅರಿತುಕೊಳ್ಳಬೇಕು ಎಂದು ವಿವರಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಸದಸ್ಯ ಹೆಚ್.ಸಿ.ರಾಘವೇಂದ್ರ, ವಿಜಯನಗರ ಜಿಲ್ಲೆಯ ಸಖಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕಿ ಡಾ.ಭಾಗ್ಯಲಕ್ಷ್ಮೀ, ರೀಡ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸಿ.ತಿಪ್ಪೇಶಪ್ಪ, ಮೈಸೂರು ಆರ್‌ಎಲ್‌ಹೆಚ್‌ಪಿ ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ಸಿಎಸಿಎಲ್‌ಕೆ ಸಂಚಾಲಕಿ ಸರಸ್ವತಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಬಾಲ್ಯ ವಿವಾಹ ನಿಷೇಧ ಕುರಿತು ಜಾಗೃತಿ ಭಿತ್ತಿಪತ್ರಗಳನ್ನು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಬಳ್ಳಾರಿ ನಗರ ಡಿವೈಎಸ್ಪಿ ಚಂದ್ರಕಾಂತ ನಂದಾರೆಡ್ಡಿ, ಉಚ್ಛ ನ್ಯಾಯಾಲಯದ ಅಡಿಷನಲ್ ಅಡ್ವೋಕೇಟ್ ಜನರಲ್ ಕೇಶವ ರೆಡ್ಡಿ, ಸಿಡಬ್ಲ್ಯೂಸಿ ಅಧ್ಯಕ್ಷೆ ವಿಜಯಲಕ್ಷ್ಮೀ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಮಕೃಷ್ಣ ನಾಯಕ್.ಎಂ., ಗಾಂಧಿನಗರ ಪೊಲೀಸ್‌ಠಾಣೆ ಇನ್ಸ್‌ಪೆಕ್ಟರ್ ಸಿದ್ಧರಾಮೇಶ್ವರ, ರೀಡ್ಸ್ ಸಂಸ್ಥೆಯ ಯೋಜನಾ ವ್ಯವಸ್ಥಾಪಕಿ ಕೆ.ಸೀತಾ ಮಹಾಲಕ್ಷ್ಮಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ವಿವಿಧ ಎನ್‌ಜಿಒ ಸಂಘ ಸಂಸ್ಥೆಗಳ ನಿರ್ದೇಶಕರು, ಸ್ವಯಂ ಸೇವಕರು ಹಾಗೂ ರೀಡ್ಸ್ ಸಂಸ್ಥೆಯ ಸಿಬ್ಬಂದಿ ವರ್ಗದವರು, ಮತ್ತಿತರರು ಉಪಸ್ಥಿತರಿದ್ದರು.

# ಬಾಲಕಿಯರ ವಸತಿ ಶಾಲೆಗೆ ರಾಜ್ಯ ಮಕ್ಕಳ ಆಯೋಗದ ಸದಸ್ಯ ಶಶಿಧರ ಭೇಟಿ



■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯ ಕುರುಗೋಡು ಪಟ್ಟಣದ ಗಾಂಧಿತತ್ವ ಆಧಾರಿತ ಬಾಲಕಿಯರ ವಸತಿ ಶಾಲೆಗೆ ರಾಜ್ಯ ಮಕ್ಕಳ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ಬುಧವಾರ ಭೇಟಿ ನೀಡಿ, ಅಲ್ಲಿನ ಸ್ಥಿತಿಗತಿ ಪರಿಶೀಲನೆ ಮಾಡಿ, ಮಕ್ಕಳೊಂದಿಗೆ ಸಂವಾದ ನಡೆಸಿ, ಮಕ್ಕಳಿಂದ ಮಾಹಿತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು, 'ಕೂಡಲೇ ಇನ್ನು ಒಂದು ವಾರದಲ್ಲಿ ಶಾಲೆಯನ್ನು ಸ್ಥಳಾಂತರ ಮಾಡಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಎ.ಕೆ.ಜಲಾಲಪ್ಪ ಅವರಿಗೆ ಸೂಚಿಸಿದರು.'

ಶಾಲೆಯ ನೂತನ ಕಟ್ಟಡಕ್ಕಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳೊಂದಿಗೆ ದೂರವಾಣಿಯ ಮೂಲಕ ಸಂಪರ್ಕಿಸಿದ್ದು, ಕಟ್ಟಡ ಜಾಗಕ್ಕಾಗಿ ಸೂಕ್ತ ಕ್ರಮಕೈಗೊಂಡು ಆಯೋಗಕ್ಕೆ ವರದಿ ಸಲ್ಲಿಸಬೇಕು ಎಂದು ಸೂಚನೆ ನೀಡಿದರು.

ಈಗಾಗಲೇ ನಿವೇಶನ ಲಭ್ಯವಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕಾರಿಗಳು ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ವಿಳಂಬವಾದರೇ, ಡಿಎಂಎಫ್ ಅನುದಾನದಲ್ಲಿ ಅಂದಾಜು ರೂ.10ಕೋಟಿ ಮಂಜೂರು ಮಾಡಲು ಈ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗುವುದು.

ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸೂಕ್ತ ವಾತಾವರಣ ನಿರ್ಮಿಸಿಕೊಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಎ.ಕೆ.ಜಲಾಲಪ್ಪ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಮಕೃಷ್ಣ ನಾಯ್ಕ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಕೈಮಗ್ಗ, ಜವಳಿ ಇಲಾಖೆಯಿಂದ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಪ್ರಸ್ತಕ ಸಾಲಿನಲ್ಲಿ ಕೈಮಗ್ಗ ನೇಯ್ಗೆ ಚಟುವಟಿಕೆಗಳಲ್ಲಿ ತೊಡಗಿರುವ, ಕೈಮಗ್ಗ ಮತ್ತು ಜವಳಿ ಇಲಾಖೆ ಹಾಗೂ ನೇಕಾರರ ಸಹಕಾರ ಸಂಘಗಳಲ್ಲಿ ನೊಂದಾಯಿತರಾದ ಅರ್ಹ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವರ್ಗದ ನೇಕಾರರಿಗೆ ದುಡಿಮೆ ಬಂಡವಾಳ, ಕೈಮಗ್ಗ, ಕೈಮಗ್ಗ ಸಲಕರಣೆಗಳನ್ನು ನೀಡಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ವಲಯ ಯೋಜನೆಯಡಿಯಲ್ಲಿ ಎಸ್‌ಸಿಪಿ ಗೆ ರೂ 1 ಲಕ್ಷ ಮತ್ತು ಟಿಎಸ್‌ಪಿಗೆ 50 ಸಾವಿರ ಹಂಚಿಕೆ ಮಾಡಿದ್ದು,ಜಿಲ್ಲೆಯ ಕಾರ್ಯನಿರತ ಕೈಮಗ್ಗ ನೇಕಾರರ ಸಹಕಾರ ಸಂಘಗಳಲ್ಲಿ ನೊಂದಾಯಿತ ಹಾಗೂ ಕೈಮಗ್ಗ ನೇಯ್ಗೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ನೇಕಾರರು ಹಾಗೂ ಸಂಬಂಧಿಸಿದ ಕೈಮಗ್ಗ ನೇಕಾರರ ಸಂಘಗಳು ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನೇರವಾಗಿ ನಗರದ ಅನಂತಪುರ ರಸ್ತೆಯ ಹೊಸ ಜಿಲ್ಲಾಡಳಿತ ಭವನದ 1ನೇ ಮಹಡಿಯ "ಎ" ಬ್ಲಾಕ್, ರೂಂ ನಂ. 29 ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ಕಚೇರಿ ಇವರನ್ನು ಸಂಪರ್ಕಿಸಬಹುದು ಅಥವಾ ಮೊ.9731905177, 9901313417 ಸಂಖ್ಯೆಗೆ ದೂರವಾಣಿ ಕರೆ ಮೂಲಕ ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರು ಕೃಷಿ ಭಾಗ್ಯ ಯೋಜನೆ ಸದುಪಯೋಗ ಪಡೆಯಲು ಸೂಚನೆ

■ ಹಂಪಿ ಟೈಮ್ಸ್ ಬಳ್ಳಾರಿ

ಪ್ರಸ್ತಕ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಮಳೆಯಾಶ್ರಿತ ಕೃಷಿ ನೀತಿ 2014ರನ್ವಯ ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಅನುಮೋದಿಸಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೃಷಿ ಜಂಟಿ ನಿರ್ದೇಶಕ ಕೆ.ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ. ಕೃಷಿ ಭಾಗ್ಯ ಯೋಜನೆಯು ಪ್ಯಾಕೇಜ್ ಮಾದರಿಯಲ್ಲಿದ್ದು, ಕ್ಷೇತ್ರ ಬದು, ಕೃಷಿ ಹೊಂಡ, ಪಾಲಿಥೀನ್ ಹೊದಿಕೆ, ಡೀಸೆಲ್, ಪೆಟ್ರೋಲ್ ಪಂಪ್‌ಸೆಟ್, ಸೋಲಾರ್ ಪಂಪ್‌ಸೆಟ್, ಲಘುನೀರಾವರಿ ಘಟಕ ಹಾಗೂ ತಂತಿ ಬೇಲಿ ಒಳಗೊಂಡಿದ್ದು, ಆಸಕ್ತ ರೈತರು ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ಈ ಯೋಜನೆಯನ್ನು ಸದುಪಯೋಗ ಪಡೆದು ಕೊಳ್ಳಬೇಕು ಎಂದು ತಿಳಿಸಿದ್ದಾರೆ.

# ಸಿಎಂ ಸಿದ್ದರಾಮಯ್ಯ ಕೇಂದ್ರ ಗೃಹ ಸಚಿವ ಅಮಿತ್ ಷಾ ಭೇಟಿ

## ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆಗೆ ಆಗ್ರಹ। 223 ತಾಲ್ಲೂಕುಗಳು ಬರ ಪೀಡಿತ। 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ

■ **ನವದೆಹಲಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಪ್ರಕೃತಿ ವಿಕೋಪ ಕುರಿತಂತೆ ಉನ್ನತ ಮಟ್ಟದ ಸಮಿತಿ ಸಭೆಯನ್ನು ಕೂಡಲೇ ಕರೆದು, ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆಗೆ ಕ್ರಮ ವಹಿಸುವಂತೆ ಆಗ್ರಹಿಸಿದರು.

ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿ ತಲೆದೋರಿದ್ದು, 236 ತಾಲ್ಲೂಕುಗಳಲ್ಲಿ 223 ತಾಲ್ಲೂಕುಗಳು ಬರ ಪೀಡಿತವಾಗಿವೆ. ಸುಮಾರು 48.19 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ ಸಂಭವಿಸಿದೆ. ಇದರಿಂದಾಗಿ ರೈತರು. ಅದರಲ್ಲೂ ಹೆಚ್ಚಿನ ಸಂಖ್ಯೆಯ ಸಣ್ಣ ಮತ್ತು ಅತಿ ಸಣ್ಣ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ರಾಜ್ಯ ಸರ್ಕಾರವು ಎನ್.ಡಿ.ಆರ್.ಎಫ್. ಮಾರ್ಗಸೂಚಿಯನ್ವಯ ಬರ ಪರಿಹಾರ ಬಿಡುಗಡೆಗಾಗಿ ಮೊದಲ ಪ್ರಸ್ತಾವನೆ ಸಲ್ಲಿಸಿ ಮೂರು ತಿಂಗಳು ಕಳೆದಿದೆ. ಆದ್ದರಿಂದ ಕೂಡಲೇ ಉನ್ನತ ಮಟ್ಟದ ಸಮಿತಿ ಸಭೆ ನಡೆಸಿ,,18,177.44 ಕೋಟಿ ರೂ. ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ಇದರಲ್ಲಿ 4663.12 ಕೋಟಿ ರೂ. ಇನ್‌ಪುಟ್ ಸಬ್ಸಿಡಿ, 12,577.86 ಕೋಟಿ ರೂ. ತುರ್ತು ಪರಿಹಾರ, 566.78 ಕೋಟಿ ರೂ. ಕುಡಿಯುವ ನೀರಿಗಾಗಿ ಹಾಗೂ 363.68 ಕೋಟಿ ರೂ. ಜಾನುವಾರುಗಳ ಸಂರಕ್ಷಣೆಗಾಗಿ ಒದಗಿಸುವಂತೆ ಕೋರಲಾಗಿದೆ.



ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಪರಿಗಣಿಸುವಾಗ ಕೇಂದ್ರ ಸರ್ಕಾರವು 2015–16ರ ಕೃಷಿ ಗಣತಿಯ ದತ್ತಾಂಶವನ್ನು ಪರಿಗಣಿಸುತ್ತಿದೆ. ಆದರೆ ಇದು 8 ವರ್ಷ ಹಳೆಯ ಮಾಹಿತಿಯಾಗಿದ್ದು, ಆಸ್ತಿ ವಿಭಜನೆ ಮತ್ತಿತರ ಕಾರಣಗಳಿಂದ ಸಣ್ಣ ಮತ್ತು ಅತಿ ಸಣ್ಣ ರೈತರ ಸಂಖ್ಯೆ ಹೆಚ್ಚಾಗಿದ್ದು, 83 ಲಕ್ಷಕ್ಕೂ ಹೆಚ್ಚಿದೆ. ಪಿಎಂ–ಕಿಸಾನ್ ಯೋಜನೆಗೆ ರಾಜ್ಯದ ರೈತರ ದತ್ತಾಂಶ ಸಂಗ್ರಹಿಸುವ ತಂತ್ರಾಂಶ ಫ್ರೂಟ್ಸ್‌ನಲ್ಲಿ ದಾಖಲಿಸಿದ ಮಾಹಿತಿಯನ್ನು ಪರಿಗಣಿಸಲಾಗುತ್ತಿದೆ. ಅಂತೆಯೇ ಬೆಳೆ ಪರಿಹಾರ ವಿತರಣೆಗೂ ಈ ದತ್ತಾಂಶವನ್ನು ಪರಿಗಣಿಸುವಂತೆ ಮುಖ್ಯಮಂತ್ರಿಗಳು ಮನವಿ ಮಾಡಿದರು.

ಬರ ಪರಿಹಾರಕ್ಕಾಗಿ ರಾಜ್ಯದ ಮೊದಲ ಪ್ರಸ್ತಾವನೆಯನ್ನು ಕೇಂದ್ರ ಕೃಷಿ ಸಚಿವಾಲಯಕ್ಕೆ ದಿನಾಂಕ 22–09–2023 ರಂದ ಸಲ್ಲಿಸಲಾಗಿತ್ತು ಭಾರತ ಸರ್ಕಾರದ ಬರ ಅಧ್ಯಯನ ತಂಡವು ಅಕ್ಟೋಬರ್ ತಿಂಗಳ 4 ರಿಂದ 9ರ ನಡುವೆ ಭೇಟಿ ನೀಡಿ, ವರದಿಯನ್ನು ಸಲ್ಲಿಸಿದೆ. ಅದರ ನಂತರ ಇನ್ನೂ 21 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಯಿತು. ಆದ್ದರಿಂದ ಅಕ್ಟೋಬರ್ 20 ರಂದು ಕೇಂದ್ರ ಕೃಷಿ ಸಚಿವಾಲಯಕ್ಕೆ ಎನ್.ಡಿ.ಆರ್.ಎಫ್. ಅಡಿ 17,901.73 ಕೋಟಿ ರೂ. ಪರಿಹಾರ ಒದಗಿಸುವಂತೆ ಪ್ರಸ್ತಾವನೆ ಸಲ್ಲಿಸಲಾಯಿತು. ಇದರಲ್ಲಿ ತುರ್ತು ಪರಿಹಾರದ12,577.86 ಕೋಟಿ ರೂ. ಮೊತ್ತವೂ ಸೇರಿದೆ. ನವೆಂಬರ್ 4 ರಂದು ಹೆಚ್ಚುವರಿಯಾಗಿ 7 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಯಿತು. ಈ ಹಿನ್ನೆಲೆಯಲ್ಲಿ ಸಲ್ಲಿಸಿದ ಪೂರಕ ಮನವಿಯೊಂದಿಗೆ ಕೇಂದ್ರದಿಂದ 18,177.44 ಕೋಟಿ ರೂ. ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಮೊದಲ ಮನವಿ ಸಲ್ಲಿಸಿ ಈಗಾಗಲೇ ಮೂರು ತಿಂಗಳು ಕಳೆದಿದ್ದು, ರೈತರು ಅತ್ಯಂತ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಬೆಳೆ ವಿಫಲವಾಗಿರುವ ಹಿನ್ನೆಲೆಯಲ್ಲಿ ರೈತರಿಗೆ ಇನ್‌ಪುಟ್ ಸಬ್ಸಿಡಿ ನೀಡುವುದು ಅತ್ಯಗತ್ಯವಾಗಿದೆ ಎಂದು ಮುಖ್ಯಮಂತ್ರಿಗಳು ಪ್ರತಿಪಾದಿಸಿದರು.

ಈ ಸಂದರ್ಭದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉಪಸ್ಥಿತರಿದ್ದರು.





## ಮೈಕ್ರೋ ನ್ಯೂಸ್

### ವಿಮ್ಸ್ಗೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಭೇಟಿ ನೀಡಿ ಪರಿಶೀಲನೆ



**ಹಂಪಿ ಟೈಮ್ಸ್ ಬಳ್ಳಾರಿ**
ನಗರದ ವಿಮ್ಸ್ ಆಸ್ಪತ್ರೆಗೆ ಬುಧವಾರ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ಭೇಟಿ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ವಿಮ್ಸ್ಗೆ ಭೇಟಿ ನೀಡಿದ ಸಂದರ್ಭದಲ್ಲಿ, ಒಂದೇ ಬೆಡ್ನಲ್ಲಿ ಮೂರು ಮಕ್ಕಳಿಗೆ ಚಿಕಿತ್ಸೆ ನೀಡುತ್ತಿರುವುದನ್ನು ಕಂಡು ಅಧಿಕಾರಿಗಳಿಗೆ ಸರಿಪಡಿಸಲು ಸೂಚನೆ ನೀಡಲಾಗಿತ್ತು. ಈಗ ಒಂದು ಬೆಡ್ನಲ್ಲಿ ಒಂದೇ ಮಗುವಿಗೆ ಚಿಕಿತ್ಸೆ ನೀಡುತ್ತಿರುವುದು ಕಂಡು ತೃಪ್ತಿ ತಂದಿದೆ ಎಂದರು.

ಎನ್ಆರ್ಸಿ ಘಟಕ, ಆರ್ ಬಿಎಸ್ ಹೆಚ್ ತಂಡ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ತೀರಾ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಸರ್ವೇ ಮಾಡದೇ ಇರುವುದು ಬೇಸರದ ಸಂಗತಿಯಾಗಿದೆ. ಎರಡು ಆರ್ ಬಿಎಸ್ ಹೆಚ್ ತಂಡಗಳನ್ನು ರಚಿಸಿ, ಮಕ್ಕಳ ದಾಖಲೆ ಮಾಡುವುದಕ್ಕೆ ಮುಂದಾಗಬೇಕು ಎಂದು ಸೂಚನೆ ನೀಡಿದರು.

ಕಳೆದ ಎರಡು ಮೂರು ವರ್ಷಗಳಿಂದ ಪೌಷ್ಠಿಕ ಪುರ್ನಚೇತನ ಘಟಕದಲ್ಲಿ ಕೆಲಸ ನಿರ್ವಹಿಸುವ ತಾಯಂದಿರ ದಿನಗೂಲಿ ಅನುದಾನ ನೀಡಿಲ್ಲ, ತಾಯಂದಿಯರು ಬಡವರು ಇರುತ್ತಾರೆ. ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು 400 ಜನರ ದಿನಗೂಲಿ ಅನುದಾನಕ್ಕೆ ಕ್ರಮವಹಿಸಬೇಕು ಎಂದರು. ನಂತರ, ವಿಮ್ಸ್ನ ಬಾಣಂತಿಯರ ಘಟಕಗಳಲ್ಲಿ ಶೌಚಾಯಲ ಮತ್ತು ಸ್ನಾನದ ಕೊಠಡಿಗಳ ನಿರ್ವಹಣೆ ಇಲ್ಲ. ವಿಮ್ಸ್ ನಿರ್ದೇಶಕರು ಕ್ರಮವಹಿಸಬೇಕಾಗಿದೆ. ಬಾಣಂತಿಯರಿಗೆ ಬೀಸಿ ನೀರಿನ ಸೌಕರ್ಯ ಇಲ್ಲ, ಬಿಸಿ ನೀರಿನ ಸೌಕರ್ಯ ಕಲ್ಪಿಸಲು ಸಂಬಂಧಿಸಿದ ಅಧಿಕಾರಿಗಳು ಗಮನ ಹರಿಸಬೇಕು ಎಂದರು. ಈ ಸಂದರ್ಭದಲ್ಲಿ ವಿಮ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಗೂ ಮತ್ತಿತರು ಹಾಜರಿದ್ದರು.

# ಜನರ ಅಹವಾಲಿಗೆ ಪರಿಹಾರ
## ಶಾಸಕ ಕೆ.ನೇಮಿರಾಜ ನಾಯ್ಕ ಹೇಳಿಕೆ

■ **ಹಂಪಿ ಟೈಮ್ಸ್ ಹೊಸಪೇಟೆ**
ಜನರ ಅಹವಾಲುಗಳಿಗೆ ಶೀಘ್ರದಲ್ಲಿಯೇ ಪರಿಹಾರ ನೀಡಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಹಗರಿಬೊಮ್ಮನಹಳ್ಳಿ ಶಾಸಕರಾದ ಕೆ.ನೇಮಿರಾಜ ನಾಯ್ಕ ಹೇಳಿದರು.



ಜಿಲ್ಲಾಡಳಿತಹಾಗೂಜಿಲ್ಲಾಪಂಚಾಯಿತಿಇವರ ಸಂಯುಕ್ತಾಶ್ರಯದಲ್ಲಿ ಬುಧವಾರ ಹಗರಿಬೊಮ್ಮನಹಳ್ಳಿ ತಾಲ್ಲೂಕು ಆಡಳಿತ ಸೌಧದಲ್ಲಿ ಆಯೋಜಿಸಿದ್ದ ತಾಲ್ಲೂಕು ಮಟ್ಟದ 'ಜನತಾದರ್ಶನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೆಲಸಗಳಿಗಾಗಿ ಕಚೇರಿಗಳಿಗೆ ಜನರ ಅಲೆದಾಟ ತಡೆಯುವುದು ಹಾಗೂ ಸಾರ್ವಜನಿಕರ ಹೊರೆತಡೆಯುವ ಉದ್ದೇಶ ಜನತಾದರ್ಶನ ಕಾರ್ಯಕ್ರಮದ್ದಾಗಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಪರಿಹಾರದ ಜೊತೆಗೆ ಸಕಾಲದಲ್ಲಿ ಸೇವೆಗಳು ಸಿಗಬೇಕು. ಯಾವುದೇ ಕಚೇರಿಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಸೌಜನ್ಯದಿಂದ ನೋಡಿಕೊಳ್ಳಬೇಕು. ಫಲಾನುಭವಿಗಳ ಅರ್ಜಿ, ಅಹವಾಲುಗಳನ್ನು ಆಲಿಸಿ, ತಕ್ಷಣವೇ ಕೆಲಸ ಮಾಡಿಕೊಡಬೇಕುಎಂದರು.

ಮನೆ ಬಾಗಿಲಿಗೆ ಜನನ-ಮರಣ ಪ್ರಮಾಣ ಪತ್ರದಿಂದ ಮಕ್ಕಳ ವಿದ್ಯಾಭ್ಯಾಸ, ಆಸ್ತಿಗಳ ಸಂಬಂಧಿಸಿದ ಕಾರ್ಯಗಳಿಗೆ ಅನುಕೂಲವಾಗಿದೆ. ಹಗರಿಬೊಮ್ಮನಹಳ್ಳಿಯ ರೈತರು ಹಾಗೂ ಕೂಲಿಕಾರರು ಕೂಡಿರುವ ಕ್ಷೇತ್ರವಾಗಿದೆ. ಪೋಡಿ ಹಾಗೂ ಪೌತಿಗೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಡುವ ವ್ಯವಸ್ಥೆಗೆ ಚಾಲನೆ ನೀಡಲಾಗಿದ್ದು, ರೈತರುಇದರ ಸದುಪಯೋಗ ಪಡೆದುಕೊಳ್ಳಬೇಕು. ವೃದ್ಧಾಪ್ಯ ವೇತನಕ್ಕಾಗಿ ಕಚೇರಿಗೆ ಅಲೆದಾಡುವುದು ಅಗತ್ಯವಿಲ್ಲ. ಕಂದಾಯ ಇಲಾಖೆ ಅಧಿಕಾರಿಗಳು ನೇರವಾಗಿ ಫಲಾನುಭವಿಗಳ ಬಳಿ ಬಂದು, ಆಧಾರ್ಕಾರ್ಡ್ ಆಧಾರದ ಮೇಲೆ ಅರ್ಹ ಫಲಾನುಭವಿಗೆ ಪಿಂಚಣಿ ನೀಡಲುಕ್ರಮ ಕೈಗೊಳ್ಳುವರು. ಇದಕ್ಕೆ ಸಂಬಂಧಿಸಿದಂತೆ ಪ್ರತಿ ತಿಂಗಳು ಅರ್ಜಿ ವಿಲೇ ಮಾಡುವ ವ್ಯವಸ್ಥೆಯನ್ನು ಸಹ ಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಭಾಗದ ಜನಸಾಮಾನ್ಯರ ಸಮಸ್ಯೆಗಳನ್ನು ಸರಿಪಡಿಸುವುದರ ಜೊತೆಗೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸೋಣಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸಾರ್ವಜನಿಕರಿಂದ ಅರ್ಜಿ ಸ್ವೀಕರಿಸಿ ಅಹವಾಲುಗಳನ್ನು ಆಲಿಸಿದರು. ಇದೆ ವೇಳೆ ಮಾತನಾಡಿದರು, ಸರ್ಕಾರದ ನಿರ್ದೇಶನದನ್ವಯ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಸ್ಥಳದಲ್ಲಿಯೇ ಪರಿಹಾರ ಕೈಗೊಳ್ಳಲು ತಾಲ್ಲೂಕು ಮಟ್ಟದ ಜನತಾದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ನಮೂನೆ-3 ಸಿಗುತ್ತಿಲ್ಲ ಎಂದು ಅರ್ಜಿಗಳು ಸ್ವೀಕೃತವಾಗಿದೆ. ಈಗಾಗಲೇ ಮನೆ ಬಾಗಿಲಿಗೆ ಇ-ಸ್ವತ್ತು ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ದಾಖಲೆಗಳು ಅಧಿಕೃತವಾಗಿದ್ದಲ್ಲಿ ಮನೆ ಬಾಗಿಲಿಗೆ ಇ-ಸ್ವತ್ತು ಸೇವೆ ಸಿಗಲಿದೆ. ನಗರದ ಅಭಿವೃದ್ಧಿಗಾಗಿ ಸಾಕಷ್ಟು ಅರ್ಜಿಗಳು ಬಂದಿದ್ದು, ಮನೆ, ಚರಂಡಿ ನಿರ್ಮಾಣ, ಸ್ವಚ್ಛತೆಗಾಗಿ ಕ್ರಮ ಕೈಗೊಳ್ಳಲು ಹಾಗೂ ಕುಡಿಯುವ ನೀರಿಗಾಗಿ ಯಾವುದೇರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಾರ್ಯಕ್ರಮದಲ್ಲಿ ಸ್ವೀಕೃತವಾಗುವ ಅರ್ಜಿಗಳ ವಿಲೇವಾರಿಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ನಿಯಮಾನುಸಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ತಹಶೀಲ್ದಾರ ಶಂಬಣ್ಣ ಗಾಳಿ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಪರಮೇಶ್ವರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

**ವಿವಿಧ ಇಲಾಖೆಗಳ ಕೌಂಟರ್ ಸ್ಥಾಪನೆ:**
ಸಾರ್ವಜನಿಕರಿಂದ ಅಹವಾಲು ಸಲ್ಲಿಕೆಗೆ ಕೌಂಟರ್ ಸ್ಥಾಪಿಸಿ, ಜಿಲ್ಲಾಡಳಿತದಿಂದ ಇಲಾಖಾವಾರು ಅಧಿಕಾರಿ, ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಕಂದಾಯ ಇಲಾಖೆ, ತಾಲ್ಲೂಕು ಪಂಚಾಯತ್, ಪೌರಾಡಳಿತ, ಕೃಷಿ ಇಲಾಖೆ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಕೌಂಟರ್ತೆರೆದು ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಲಾಯಿತು. ಪಿಂಚಣಿ ಸೌಲಭ್ಯ ಸೇರಿದಂತೆ ಕೆಲವೊಂದನ್ನು ಅಹವಾಲುಗಳಿಗೆ ಜಿಲ್ಲಾಧಿಕಾರಿಗಳು ಸ್ಥಳದಲ್ಲಿಯೇ ಪರಿಹರಿಸಿದರು.



# ಡಿ.23,24 ರಂದು ವೀರಶೈವ ಲಿಂಗಾಯಿತ ಮಹಾಧಿವೇಶನ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಇದೇ ಡಿ.23 ಮತ್ತು 24ರಂದು ದಾವಣಗೆರೆ ನಗರದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದಿಂದ 24ನೇ ಮಹಾ ಅಧಿವೇಶನ ನಡೆಯಲಿದೆ ಎಂದು ಪ್ರಕಾಶ್ ಪಾಟೇಲ್ ತಿಳಿಸಿದರು.

ಪಟ್ಟಣದ ಹರ ದೇವಸ್ಥಾನದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ವೀರಶೈವ ಲಿಂಗಾಯಿತ ಸಮಾಜ ಅನೇಕ ವರ್ಷಗಳಿಂದ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದೆ. ಮೀಸಲಾತಿ ಸೇರಿದಂತೆ ಜಾತಿ ಗಣತಿ ವರದಿ ಸರಿಯಾಗಿ ತಯಾರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಕಾಂತರಾಜ್ ವರದಿ ಕೂಡ ಅವಜ್ಞಾನಿಕದಿಂದ ಕೂಡಿದ್ದು ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸವಾಗಿದೆ ಎಂದು ಮಹಾಸಭಾದಲ್ಲಿ ಹಕ್ಕುತ್ತಾಯ ಮಾಡುತ್ತೇವೆ. ಲಿಂಗಾಯಿತ ಉಪ ಪಂಗಡಗಳು ಎನ್ನದೆ ಎಲ್ಲರನ್ನೂ ಸಮಾನವಾಗಿ ಪರಿಗಣಿಸಿಕೊಂಡು ಹೋಗಬೇಕು ಎಂಬುವುದು ನಮ್ಮ ಆಶಯವಾಗಿದೆ. ದಾವಣಗೆರೆಯಲ್ಲಿ ನಡೆಯುವ ಮಹಾ ಅಧಿವೇಶನದಲ್ಲಿ ಎಲ್ಲಾ ಶಾಸಕರು ಲೋಕಸಭಾ ಸದಸ್ಯರು ನಾಡಿನ ಹಿರಿಯ ಮುಖಂಡರು ಭಾಗವಹಿಸಲಿದ್ದಾರೆ ಸಮಾಜದ ಬಂಧುಗಳು ಕಾರ್ಯಕ್ರಮಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ತಾಲೂಕು ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಶಿವರುದ್ರ, ಹರಪನಹಳ್ಳಿ ಮಹಾಸಭಾಧ್ಯಕ್ಷ ಸಿನಿಮಾ ರಾಜಣ್ಣ, ಮಹಿಳಾ ಮಹಾಸಭಾ ಅಧ್ಯಕ್ಷೆ ಇಂದುಮತಿ, ಮಂಗಳಗೌರಿ, ಬಣಜಿಗ ಸಮಾಜದ ತಾಲೂಕ ಅಧ್ಯಕ್ಷ ರಾಚಪ್ಪ, ಪಂಚಮಸಾಲಿ ಸಮಾಜದ ಅಧ್ಯಕ್ಷ ಅಕ್ಕಿ ಶಿವಕುಮಾರ್, ನೇಕಾರ ಸಮಾಜದ ಅಧ್ಯಕ್ಷ ನಾಗರಾಜ್, ಮುಖಂಡರಾದ ಬನ್ನಿಗೋಳ ವೆಂಕಣ್ಣ, ಕೋರಿ ಪ್ರಕಾಶ್, ಮುಖಂಡ ಹನಿಸಿ ದೇವರಾಜ್, ಅಕ್ಕಿ ಬಸವರಾಜ್, ಕೊಟ್ರಗೌಡ, ದಕ್ಷಿಣಮೂರ್ತಿ, ಬಿ.ಜಿ.ಹಳ್ಳಿ ವಿರುಪಾಕ್ಷ, ಎ.ಎಂ.ಪೂರ್ಣಯ್ಯ ಮುಂತಾದವರಿದ್ದರು.

ದಾವಣಗೆರೆಯಲ್ಲಿ ನಡೆಯಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದಿಂದ 24ನೇ ಅಧಿವೇಶನದ ಪೋಸ್ಟರ್ಗಳನ್ನು ಹಗರಿಬೊಮ್ಮನಹಳ್ಳಿಯ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆಗೊಳಿಸಿದರು.






# ಗುತ್ತಿಗೆದಾರರ ನಿರ್ಲಕ್ಷ್ಯ ಪ್ರಯಾಣಿಕರು ಹೈರಾಣ
## ಪೈಪ್ ಲೈನ್ ಕಾಮಗಾರಿಗೆ ರಸ್ತೆ ಅಗೆದರು । ರೆಸ್ಟೋರೇಷನ್ ಮಾಡದೆ ಮಾಯವಾದರು

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಪಟ್ಟಣದ ಎಲ್ಲೆಡೆ ರಸ್ತೆ ಹದಗೆಟ್ಟು ಸಂಚಾರಕ್ಕೆ ಯೋಗ್ಯವಿಲ್ಲದಂತಾದ ರಸ್ತೆಗಳಾಗಿವೆ. ಕಾರಣ ಪಟ್ಟಣದ ಮೂಲಕ ಪಾವಗಡಕ್ಕೆ ಹಾದು ಹೋಗಿರುವ ಕುಡಿಯುವ ನೀರಿನ ಪೈಪ್ ಲೈನ್ ಕಾಮಗಾರಿಗೆ ರಸ್ತೆಯನ್ನು ಅಗೆದ ಗುತ್ತಿಗೆದಾರರು, ಮುಚ್ಚದೆ ಎಲ್ಲೆಂದರಲ್ಲಿ ಅಗೆದು ರಸ್ತೆ ಹದಗೆಡಿಸಿದ್ದಾರೆ. ನಿತ್ಯವೂ ಧೂಳಿನ ಕಾಟದಿಂದ, ಅಪಾಯಕ್ಕೆ ಆಹ್ವಾನ ನೀಡುವ ತಗ್ಗು ಕುಣಿಗಳಿಂದ ಜನತೆ ಬೇಸತ್ತು ಹೋಗಿದ್ದಾರೆ. ಪಟ್ಟಣದ ಹೃದಯಭಾಗವಾದ ನಾಣಿಕೆರೆವೃತ್ತದಲ್ಲಿ,ಕೂಡ್ಲಿಗಿರಸ್ತೆ,ವೆಂಕಟಾಪುರ ರಸ್ತೆ,ಕಟುಗರ ಓಣಿಯ ಮೂಲಕ ಹಾದು ಹೋಗಿರುವ ಪೈಪ್ ಲೈನ್ ಕಾಮಗಾರಿಗೆ ಆಳವಾಗಿ ರಸ್ತೆಗಳನ್ನು ಅಗೆದು ಮುಚ್ಚಿದ್ದಾರೆ ವಿನಃ ರಸ್ತೆಯನ್ನು ಸರಿಪಡಿಸುವ ಗೋಜಿಗೆ ಹೋಗದ ಗುತ್ತಿಗೆದಾರರ ನಿರ್ಲಕ್ಷ್ಯತನದಿಂದ ಅಪಾಯಗಳಾಗುತ್ತಿವೆ.ಅಲ್ಲದೆ ಅಗೆದ ರಸ್ತೆಗಳ ಧೂಳಿನಿಂದ

ಜನರು ಅನಾರೋಗ್ಯದಿಂದ ಬಳಲುವಂತ ಪ್ರಸಂಗ ಎದುರಾದರೂ ಕೂಡಾ ಇತ್ತ ಕಡೆ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸದಿರುವುದರಿಂದ ಪ್ರತಿದಿನ ರಸ್ತೆಯ ಧೂಳಿನಲ್ಲಿಯೇದಿನಕಳೆಯುವಂತಪರಿಸ್ಥಿತಿಎದುರಾಗಿದೆ,ಅಷ್ಟೊಂದು ರಸ್ತೆಹದಗೆಟ್ಟುಗುಂಡಿಗಳಾಗಿವೆ,ಗುತ್ತಿಗೆದಾರರ ನಿರ್ಲಕ್ಷ್ಯದಿಂದ,ಪೈಪ್ ಲೈನ್ ಕಾಮಗಾರಿಯ ಸ್ಥಳಗಳಲ್ಲಿ ಜನತೆ ಅಪಾಯಕಾರಿ ಸಮಸ್ಯೆಗಳನ್ನು ಎದುರಿಸುವಂತಾಗಿದೆ ಎಂದು ಸಾರ್ವಜನಿಕರು ದೂರಿದರು.

"ಪೈಪ್ ಲೈನ್ ಕಾಮಗಾರಿಗಳಿಗೆ ಪಟ್ಟಣದ ಸಿ.ಸಿ.ರಸ್ತೆಗಳನ್ನು ಒಡೆದು,ರಸ್ತೆಗಳನ್ನು ಹದಗೆಡಿಸಿದ್ದರಿಂದ ಜನರು ಬೇಸಿಗೆಯಲ್ಲಿ ಧೂಳು ಸೇವಿಸಿದರು, ಉತ್ತಮ ಸಿ.ಸಿ. ರಸ್ತೆಹಾಳಾಗಿದೆ,ಕಾಮಗಾರಿಗೆ ರಸ್ತೆ ಅಗೆದವರು ದುರಸ್ತಿಗೊಳಿಸದೆ ಇರುವುದರಿಂದ,ಸಿ.ಸಿ.ರಸ್ತೆ ಮಾಯವಾಗಿ ಕಚ್ಚಾ ರಸ್ತೆಯಾಗಿ ಮಾರ್ಪಟ್ಟು,ಸಂಚರಿಸಲು ಯೋಗ್ಯವಿಲ್ಲದಂತಾಗಿದೆ.



> ಪಾವಗಡ ಪೈಪ್ ಲೈನ್ ಕಾಮಗಾರಿಯಿಂದ ರಸ್ತೆಯು ಹಾಳಾಗಿ ಅಗೆದ ರಸ್ತೆಯಲ್ಲಿ ಗುಂಡಿಗಳಾಗಿ ಆಯತಪ್ಪಿ ಏನಾದರೂ ಬಿದ್ದರೆ ಆಸ್ಪತ್ರೆ ಸೇರುವುದು ಖಚಿತ,ಗುತ್ತಿಗೆದಾರರು, ಅಧಿಕಾರಿಗಳು ಕೂಡಲೇ ಈ ರಸ್ತೆಗಳಿಗೆ ಕೂಡ್ಲಿಗಿ ರಸ್ತೆಗೆ ಡಾಂಬರೀಕರಣ,ನಾಣಿಕೆರೆ ವೃತ್ತದಿಂದ ಕಿತ್ತುಹೋದ ವೆಂಕಟಾಪುರರಸ್ತೆಗೆ ಸಿ.ಸಿ.ಹಾಕಿ ಸುಗಮ ರಸ್ತೆ ಸಂಚಾರಕ್ಕೆ ಅನುಕೂಲ ಮಾಡ ಬೇಕು.
>
> – **ಗೌಳೇರ ರುದ್ರಪ್ಪ,** ಸ್ಥಳೀಯ

**IN THE COURT OF THE CIVIL JUDGE AND J.M.F.C.AT KUDLIGI**
**Crl. Misc. No.266/2023**

Between: 1) Durgamma D/O Late Shidlappa aged about 62 years, 2) Siddappa son of late Sidlappa aged about 60 years, 3) Harijan Rajaiah @ Rajappa aged about 48 years, 4) Smt.Obamma wife of late Channappa aged about 63 years, 5) Smt.Renuka.H wife of late Nagappa aged about 46, 6) H.uday Kumar son of late Channappa aged about 36 years, All are Hindu agriculturist resident of Chandrashekharapuru Village in Kudligi Taluk, Vijayanagara District..........Petitioner

And

The Tahasildar Kudligi ........Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.** Whereas the above petitioner has instituted above petition to get the death certificate of his deceased Petitioner No.1 to 3's Mother petitioner No's 4 and 5's Mother –in law petitioner No 6's grandmother by Name Palamma wife of late Sidlappa was died on 25/06/2011 at Chandrashekharapura village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 28/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 15/12/2023.

By Order of the court
Chief Ministerial officer
Civil Judge and J.M.F.C Kudligi

H.Ravi
T.Hanumanthappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI**
**Crl. Misc. No.267/2023**

Between: 1) Durgamma D/O Late Shidlappa aged about 62 years, 2) Siddappa son of late Sidlappa aged about 60 years, 3) Harijan Rajaiah @ Rajappa aged about 48 years, 4) Smt.Obamma wife of late Channappa aged about 63 years, 5) Smt.Renuka.H wife of late Nagappa aged about 46, 6) H.uday Kumar son of late Channappa aged about 36 years, All are Hindu agriculturist resident of Chandrashekharapuru Village in Kudligi Taluk, Vijayanagara District........... Petitioner

And

The Tahasildar Kudligi .......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner No.1 to 3's Father petitioner No's 4 and 5's Father –in law petitioner No 6's grandfather by Name Sidlappa Son of late Sidlappa was died on 15/08/2004 at Chandrashekharapura village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 28/12/2023 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 15/12/2023.

By Order of the court
Chief Ministerial officer
Civil Judge and J.M.F.C Kudligi

H.Ravi
T.Hanumanthappa
Advocate, Kudligi

**IN THE COURT OF THE CIVIL JUDGE AND J.M.F.C.AT KUDLIGI**
**Crl. Misc. No.273/2023**

Between: 1) Durgamma D/O Late Shidlappa aged about 62 years, 2) Siddappa son of late Sidlappa aged about 60 years, 3) Harijan Rajaiah @ Rajappa aged about 48 years, 4) Smt.Obamma wife of late Channappa aged about 63 years, 5) Smt.Renuka.H wife of late Nagappa aged about 46, 6) H.uday Kumar son of late Channappa aged about 36 years, All are Hindu agriculturist resident of Chandrashekharapuru Village in Kudligi Taluk, Vijayanagara District.......... Petitioner

And

The Tahasildar Kudligi .......Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner has instituted above petition to get the death certificate of his deceased Petitioner No.1 to 3's brother petitioner No's 4 and 5's brother –in law petitioner No's Father by Name H.Channappa son of late Sidlappa was died on 25/04/2006 at Chandrashekharapura village in Kudligi Taluk, Vijayanagara District. On the file of the civil Judge & JMFC at Kudligi. The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 27/02/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 16/12/2023.

By Order of the court
Chief Ministerial officer
Civil Judge and J.M.F.C Kudligi

H.Ravi
T.Hanumanthappa
Advocate, Kudligi

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA